4. ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ :- ಝಳಕಿಯಲ್ಲಿ ನಡೆದ ಗೋಲಿಬಾರ್ ಬಗ್ಗೆ - ಚರ್ಚೆಗೆ ಅನುಮತಿ ಕೋರಿಕೆ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಬಿಜಾಪುರ ಜಿಲ್ಲೆಯ ಝಳಕಿಯಲ್ಲಿ 4ನೇ ತಾರೀಖು ಗುರುವಾರ ಗೋಲಿಬಾರ್ ಆಗಿದೆ. ಅದರಲ್ಲಿ 4 ಜನ ಅಮಾಯಕರು ಮೃತಪಟ್ಟಿದ್ದಾರೆ. ಆ ಗೋಲಿಬಾರ್ ಏಕಾಯಿತು? ಅಲ್ಲಿದ್ದ ಬಿಜಾಪುರ ಎಸ್‌ಪಿ ಅಲ್ಲಿದ್ದ ಹಿರಿಯ ಪೊಲೀಸ್ ಅಧಿಕಾರಿಗಳು ಬಹುಶಃ ಸ್ವಲ್ಪ ತಾಳ್ಮೆ ವಹಿಸಿದ್ದರೆ ಆ ಗೋಲಿಬಾರ್ ಘಟನೆ ಆಗುತ್ತಿರಲಿಲ್ಲ. ಆ ಘಟನೆ ನಡೆಯಲು ಮೂಲ ಕಾರಣ, ಗುರುಪಾದಪ್ಪ ಬಸವರಾಜಪ್ಪ ಕೌಟೇಕರ್ ಎನ್ನುವ ಸಬ್-ಇನ್ಸ್‌ಪೆಕ್ಟರ್ ಝಳಕಿಯ ಪೊಲೀಸ್ ಠಾಣೆಯಲ್ಲಿ ಸೇವೆ ಸಲ್ಲಿಸುತ್ತಿದ್ದ ವ್ಯಕ್ತಿ. ಇವತ್ತಿನ ಪೊಲೀಸ್ ವ್ಯವಸ್ಥೆಯಲ್ಲಿ ಪ್ರಾಮಾಣಿಕರು, ಜನರ ಪ್ರೀತಿ, ವಿಶ್ವಾಸ ಗಳಿಸಿದರು ಸಿಗುವುದು ಕಡಿಮೆ. ಕಾಟೇಕರ್ ಒಬ್ಬ ಪ್ರಾಮಾಣಿಕ ಪೊಲೀಸ್ ಅಧಿಕಾರಿಯಾಗಿದ್ದ ಮತ್ತು ಅಲ್ಲಿನ ಜನರ ಪ್ರೀತಿ ವಿಶ್ವಾಸ ಗಳಿಸಿದ್ದ. ಆದರೆ, ಅಲ್ಲಿದ್ದ ಸರ್ಕಲ್ ಇನ್ಸ್‌ಪೆಕ್ಟರ್‌ನಿಗೂ, ಈತನಿಗೂ ಯಾವಾಗಲೂ ಕಾನೂನು ಬಾಹಿರ ಚಟುವಟಿಕೆಗಳ ಬಗ್ಗೆ ತಂಟೆ ನಡೆಯುತ್ತಿರುವ ಬಗ್ಗೆ ಇವತ್ತು ನನಗೆ ಮಾಹಿತಿ ಬಂದಿದೆ. ಝಳಕಿಯ ಪೊಲೀಸ್ ಸ್ಟೇಷನ್ ನ್ಯಾಷನಲ್ ಹೈ-ವೇ ಮತ್ತು ಕರ್ನಾಟಕ-ಮಹಾರಾಷ್ಟ್ರ ಬೌಂಡರಿಗೆ ಹೊಂದಿಕೊಂಡಂತಿದೆ. ಪೊಲೀಸ್ ವ್ಯವಸ್ಥೆಯಲ್ಲಿ ಕೆಲವೊಂದು ಪೊಲೀಸ್ ಠಾಣೆಗಳಲ್ಲಿ ಅತ್ಯಂತ ಲಾಭದಾಯಕ ಪೊಲೀಸ್ ಠಾಣೆಗಳೆಂದು ಗುರುತು ಮಾಡಿದ್ದಾರೆ. ಎಷ್ಟೋ ಜನ ಅಧಿಕಾರಿಗಳು ಅಂಥ ಕಡೆ ಹೋಗಲು ಪ್ರಯತ್ನಿಸುತ್ತಾರೆ. ಅಂಥ ಒಂದು ಠಾಣೆಯೇ ಝಳಕಿ ಪೊಲೀಸ್ ಠಾಣೆ. ಅಲ್ಲೊಂದು ಆರ್‌ಟಿಒ ಚೆಕ್ಕಿಂಗ್ ಪೋಸ್ಟ್ ಇದೆ. ಅದು ನಮ್ಮ ರಾಜ್ಯದಲ್ಲಿ ಆ ಬಿಜಾಪುರ ಜಿಲ್ಲೆಯ ಆರ್‌ಟಿಒ ಚೆಕ್ಕಿಂಗ್ ಪೋಸ್ಟಿಗೆ ಅತ್ಯಂತ ಕುಖ್ಯಾತಿ ಇದೆ. ಅಲ್ಲಿ ಸಾಕಷ್ಟು ಹಗರಣಗಳು ನಡೆದಿವೆ. ಅಂಥ ಕಡೆ ಪೊಲೀಸ್ ಠಾಣೆಗೆ ಸಂಬಂಧಪಟ್ಟ ಕಾಟೇಕರ್ ಹಲವಾರು ಅವ್ಯವಹಾರಗಳಿಗೆ ತಡೆಹಾಕಿದ್ದ. ಆ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಸಾಕಷ್ಟು ಮಟ್ಕಾದಂಧೆ ನಡೆಯುತ್ತಿತ್ತು. ಬೇರೆ ಬೇರೆ ರೀತಿಯ ಅವ್ಯವಹಾರ ನಡೆಯುತ್ತಿತ್ತು. ಅದಕ್ಕೆ ತಡೆಹಾಕಿದ್ದು ಕಾಟೇಕರ್. ಆತನಿಗೂ, ಆ ವ್ಯವಹಾರಕ್ಕೆ ಇಂಬು ಕೊಡುವ ಸಿ.ಐ.ಗೂ ಯಾವಾಗಲೂ ತಂಟೆ-ತಕರಾರು ಬರುತ್ತಿತ್ತು. ಆ ಹಿನ್ನೆಲೆಯಲ್ಲಿ ಆ ಪೊಲೀಸ್ ಠಾಣೆಯ ಸಮೀಪದ ಒಂದು ಗಿಡಕ್ಕೆ ನೇಣು ಹಾಕಿಕೊಂಡು ಆತ ಆತ್ಮಹತ್ಯೆ ಮಾಡಿಕೊಂಡಿದ್ದಾನೆನ್ನುವ ಸುದ್ದಿ ಇತ್ತು. ನಂತರ, ವಿವರವಾಗಿ ತಿಳಿದಾಗ, ಅದು ಆತ್ಮಹತ್ಯೆಯಲ್ಲ, ಕೊಲೆ ಎನ್ನುವ ಸಂಶಯ ಎಲ್ಲರಿಗೂ ಬಂದಿದೆ. ಹೀಗಾಗಿ ಕಾಟೇಕರ್ ಕೊಲೆಯಾಗಿದ್ದಾನೆನ್ನುವ ಸಂಶಯ ಬಂದಾಗ ಜನರು ಆದರ ವಿರುದ್ಧ ಧಂಗೆ ಎದ್ದಿದ್ದಾರೆ. ಆ ಪೊಲೀಸ್ ಠಾಣೆ ಮುಂದೆ ಐದು ಸಾವಿರಕ್ಕಿಂತಲೂ ಹೆಚ್ಚು ಜನರು ಸೇರಿದ್ದಾರೆ. ತಕ್ಷಣವೇ ಅಲ್ಲಿಗೆ ಎಸ್‌ಪಿ ಬಂದಿದ್ದರೆ ಯಾವುದೇ ತೊಂದರೆಯಾಗುತ್ತಿರಲಿಲ್ಲ. ಸುಮಾರು 10 ಗಂಟೆಗಳ ನಂತರ ಎಸ್‌ಪಿ ಚರಣರೆಡ್ಡಿಯವರು ಸ್ಥಳಕ್ಕೆ ಬಂದಿದ್ದಾರೆ. ಅಲ್ಲಿದ್ದ ಜನರ ಬೇಡಿಕೆ, ಕಾಟೇಕರ್ ಆತ್ಮಹತ್ಯೆ ಮಾಡಿಕೊಂಡಿಲ್ಲ, ಅದು ಕೊಲೆ, ಆದರ ಹಿನ್ನೆಲೆಯಲ್ಲಿ ಯಾರಿದ್ದಾರೆ, ಅವರ ಮೇಲೆ ಕಾನೂನು ಕ್ರಮ ಕೈಗೊಳ್ಳಬೇಕು, ಆದರಲ್ಲೂ ಮುಖ್ಯವಾಗಿ ಸರ್ಕಲ್ ಇನ್ಸ್‌ಪೆಕ್ಟರ್ ಎನ್.ಎಂ. ಈಟೇಕರ್ ಮೇಲೆ ಜನರ ಆಕ್ರೋಶವಿತ್ತು.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು) : ಈಗಾಗಲೇ ಝಳಕಿಗೆ ಸಂಬಂಧಪಟ್ಟಂತಹ ವಿಷಯವನ್ನು

ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಮಾನ್ಯ ಮಂತ್ರಿಗಳು ನ್ಯಾಯಂಗ ತನಿಖೆ ಇದೆ, ಜ್ಯುಡಿಷಿಯಲ್ ಕಮಿಷನ್ ಮುಂದಿರುವ ವಿಚಾರದಲ್ಲಿ ನಿಮ್ಮ ಒಪಿನಿಯನ್ ಅನ್ನು ಈ ಹೌಸ್‌ನಲ್ಲಿ ಎಕ್ಸ್‌ಪ್ರೆಸ್ ಮಾಡಿದರೆ, ಅದಕ್ಕೆ ತೊಂದರೆಯಾಗುತ್ತದೆನ್ನುವ ವಿಚಾರವನ್ನು ಹೇಳುತ್ತಿದ್ದಾರೆ. ಇದಕ್ಕಿಂತ ಹೆಚ್ಚಿನ ಮಹತ್ವದ ವಿಚಾರಗಳು ಬೇರೆ ಇದ್ದುದ್ದರಿಂದ ನಾವು ಇದನ್ನು ಈ ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ್ದೇವೆ. ಇಲ್ಲದಿದ್ದರೆ ನಿನ್ನೆ ಇದರ ಬಗ್ಗೆ ನಿಲುವಳಿ ಸೂಚನೆಯನ್ನು ತರಬೇಕಾಗಿತ್ತು. ಆದ್ದರಿಂದ, ದಯಮಾಡಿ ನಾನು ಏನು ಕೇಳುತ್ತೇನೆಂದರೆ, You please hear us about the policy administration, about the incident that has taken place without affecting the so-called judicial enquirty which has been ordered, we do not know what is going to happen to that. Without affecting that, we will speak.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಚರ್ಚೆಮಾಡುವುದು ನಿಮಗೆ ಸೂಕ್ತ ಅನ್ನಿಸುತ್ತದೆ ಎಂದರೆ ನನ್ನದೇನೂ ಅಭ್ಯಂತರವಿಲ್ಲ, ನಾವು ಈಗಾಗಲೇ ಜ್ಯುಡಿಷಿಯಲ್ ಪ್ರೋಬ್‌ಗೆ ಆರ್ಡರ್ ಮಾಡಿದ್ದೇವೆ. ಆ ವಿಷಯ ಇವತ್ತು ನ್ಯಾಯಂಗ ತನಿಖೆಯಲ್ಲಿ ಇದ್ದಾಗ ನಾವು ಅನೇಕ ವಿಷಯಗಳನ್ನು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಬರುತ್ತದೆಯೋ ಇಲ್ಲವೋ ಹೇಗೆ ಎಂಬುದರ ಬಗ್ಗೆ ಅದರ ವ್ಯಾಪ್ತಿಯನ್ನು ತಾವು ನೋಡಬೇಕು. ಏಕೆಂದರೆ, ನಮಗೆ ಏನೂ ಇಲ್ಲ, ನಾವು ತಕ್ಷಣವೇ ಜ್ಯುಡಿಷಿಯಲ್ ಪ್ರೋಬ್ ಮಾಡಿದ ಉದ್ದೇಶ ಏನು? ಅದರ ಹಿನ್ನಲೆ ಏನು? ಯಾರು? ಏತಕ್ಕಾಗಿ ಆಗಿದೆ ಎಲ್ಲವೂ ಕೂಡ ಹೊರಗೆ ಬರುತ್ತದೆ. ಅದನ್ನು ಮುಚ್ಚಿಡುವ ಪ್ರಶ್ನೆ ಇಲ್ಲ. ಅದಕ್ಕೆ ಜ್ಯುಡಿಷಿಯಲ್ ಪ್ರೋಬ್‌ಗೆ ಆರ್ಡರ ಮಾಡಿದ ಮೇಲೆ, ಇವತ್ತು ನ್ಯಾಯಾಂಗ ತನಿಖೆಯನ್ನು ನಾವು ಒಪ್ಪಿಕೊಂಡ ಮೇಲೆ, ಇದರ ಬಗ್ಗೆ ನಾವು ಚರ್ಚೆ ಮಾಡಬಹುದೋ ಅಥವಾ ಹೇಗೋ ಎನ್ನತಕ್ಕಂಥದ್ದರ ಬಗ್ಗೆ ತಾವು ಹೇಳಿದರೆ ನನಗೇನೂ ಅಭ್ಯಂತರವಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೇ, ಈಗ ಪ್ರಶ್ನೆ ಇರತಕ್ಕಂಥದ್ದು, ಮಾನ್ಯ ಗೃಹಮಂತ್ರಿಗಳು ನ್ಯಾಯಂಗ ತನಿಖೆ ಮಾಡುತ್ತೇವೆಂದು ಹೇಳಿದ್ದಾರೆಯೇ ವಿನಾಃ ನ್ಯಾಯಾಂಗ ತನಿಖೆ ಇನ್ನು ಪ್ರಾರಂಭವಾಗಿಲ್ಲ. ಇವರು ಇನ್ನೂ ಚೀಫ್ ಜಸ್ಟಿಸ್‌ಗೆ ಕಾಗದ ಬರೆದಿಲ್ಲ. ಚೀಫ್ ಜಸ್ಟೀಸ್ ಇನ್ನೂ ಜಡ್ಜ್‌ರವರನ್ನು ಅಪಾಯಿಂಟ್ ಮಾಡಿಲ್ಲ, ಹೀಗೆ ಬೇಕಾದಷ್ಟು ಪ್ರೆಸಿಡೆಂಟ್‌ಗಳಿವೆ. ಜ್ಯುಡಿಷಿಯಲ್ ಪ್ರೋಬ್ ಆಗುತ್ತಾ ಇರತಕ್ಕಂಥ ವಿಚಾರಗಳ ಬಗ್ಗೆ ಗಂಟೆಗಟ್ಟಲೆ ಚರ್ಚೆ ಮಾಡಿದ್ದೇವೆ. ನಾನು ತಮ್ಮಲ್ಲಿ ಏನು ಮನವಿ ಮಾಡಿಕೊಳ್ಳುತ್ತೇನೆಂದರೆ, ರೂಲ್ 69 ಕೆಳಗಡೆ ಇದೇ ವಿಚಾರದಲ್ಲಿ ನಾನೊಂದು ತಮಗೆ ನೋಟೀಸ್ ಕೊಟ್ಟಿದ್ದೇನೆ. ಏಕೆಂದರೆ, more that the enquiry portion or it, ಸತ್ತಮೇಲೆ ಯಾರನ್ನು ಹ್ಯಾಂಗ್ ಮಾಡಬೇಕು ಎನ್ನುವುದರ ಬಗ್ಗೆ, ಜ್ಯುಡಿಷಿಯಲ್ ಕಮಿಷನ್ ಆಗುವುದು ಅದರ ಒಂದು ಭಾಗ, ಅದರ ಬಗ್ಗೆ ಪ್ರಿಜುಡೀಸ್ ಆಗದ ಹಾಗೆ, police system, failure of the Home Minister, failure of the Police Department, Failures of the Home Department, how to improve it? ಅದರ ಬಗ್ಗೆ ನಾವು ಮಾತನಾಡಬೇಕಾಗಿದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನೀವು ಫೇಲ್ಯೂರ್ ಎಂದು ಹೇಳಿಕೊಳ್ಳಿ ಆದರ ಬಗ್ಗೆ ನನ್ನದೇನೂ ತಕರಾರು ಇಲ್ಲ. ಹೋಂ ಮಿನಿಸ್ಟರ್ ಫೇಲ್ಯೂರ್ ಎಂದು ಹೇಳಿ, ಏಕೆಂದರೆ, ನಿಮಗೆಲ್ಲಾ ಮಾತನಾಡುವುದಕ್ಕೆ ಅವಕಾಶವಿದೆ ಮಾತನಾಡಿ, ಅದನ್ನು ನಿಲ್ಲಿಸತಕ್ಕಂಥ ಶಕ್ತಿ ನನಗಿಲ್ಲ, ಜೊತೆಗೆ ಈ ಸದನದಲ್ಲಿ ಎಲ್ಲರಿಗೂ ಮಾತನಾಡಲಿಕ್ಕೆ ಹಕ್ಕು ಸಹ ಇದೆ. ನಾನು ಹೇಳತಕ್ಕಂಥದ್ದು ನಾವು ಈಗಾಗಲೇ ಹೈಕೋರ್ಟಿಗೆ ಬರೆದು ಟರ್ಮ್ಸ್ ಆಫ್ ರೆಫರ್ಸ್ ಅವರಿಗೆ ಹೇಳಿದ್ದೇವೆ. ಮಾಡುತ್ತೇವೆಂದು ಹೇಳುವುದಲ್ಲದೆ ಬರೆದಿದ್ದೇವೆ. ಒಂದು ವೇಳೆ ಈಗ ಆ ರೀತಿ ಬರೆದಾಗಲೂ ಕೂಡ ಇಲ್ಲಿ ಮಾತನಾಡಲಿಕ್ಕೆ ಬರುತ್ತದೆ ಎನ್ನುವ ಅಭಿಪ್ರಾಯ ಇದ್ದರೆ ನಾನು ಈಗಾಗಲೇ ಹೇಳಿದ ಹಾಗೆ ನನಗೇನು ಅಡ್ಡಿಯಿಲ್ಲ, ತಾವು ಚರ್ಚೆ ಮಾಡಬಹುದು. ಈಗಾಗಲೇ ಹೈಕೋರ್ಟಿನ ರಿಜಿಸ್ಟ್ರಾರ್‌ರವರಿಗೆ ಪತ್ರ ಬರೆದಿದ್ದೇವೆ. ಅದಕ್ಕಾಗಿ ನಾವು ಕ್ರಮ ತೆಗೆದುಕೊಂಡ ಮೇಲೂ ಪುನಃ ಇದರ ಬಗ್ಗೆ ಚರ್ಚೆ ಮಾಡುವುದು ಸೂಕ್ತ ಎನ್ನುವುದಾದರೆ ನನ್ನದೇನೂ ಅಭ್ಯಂತರವಿಲ್ಲ.

ಶ್ರೀ ಬಿ. ಸೋಮಶೇಖರ್ : ಮಾನ್ಯ ಅಧ್ಯಕ್ಷರೆ, ಈ ಘಟನೆಯಾದ ತಕ್ಷಣವೇ ಸರ್ಕಾರದವರು ನ್ಯಾಯಾಂಗ ತನಿಖೆಗೆ ತಾತ್ವಿಕವಾಗಿ ಆರ್ಡರ್ ಮಾಡಿರುವುದು ಸ್ವಾಗತಾರ್ಹ. ನಾವು ಇದನ್ನು ಒಪ್ಪುತ್ತೇವೆ. ಇವತ್ತು ಸದನ ಪ್ರಾರಂಭವಾಗಿರುವಾಗ ಇಂಥ ಪ್ರಮುಖವಾದ ಘಟನೆಯ ಬಗ್ಗೆ ನಾವು ಚರ್ಚೆ ಮಾಡಬೇಕಾಗಿದೆ ನಮ್ಮ ಪಕ್ಷದ ಮುಖಂಡರಾದ ಮಾನ್ಯ ಎ.ಬಿ. ಪಾಟೀಲ್‌ರು ಹೋಗಿ ನೋಡಿಕೊಂಡು ಬಂದಿದ್ದಾರೆ, ಅದೇ ರೀತಿ ಮಾನ್ಯ ವಿರೋಧ ಪಕ್ಷದ ನಾಯಕರು ಹೋಗಿ ಬಂದಿದ್ದಾರೆ. ಇಲ್ಲಿ ಕೆಲವು ವಿಚಾರಗಳನ್ನು ತಮ್ಮ ಮುಂದೆ ಇಟ್ಟಾಗ ಟರ್ಮ್ಸ್ ಆಫ್ ರೆಫರೆನ್ಸ್ ಹಾಕುವಾಗ ಅವು ತಮಗೆ ಸಹಾಯವಾಗುತ್ತದೆ. ಯಾವ್ಯಾವ ವಿಚಾರಗಳನ್ನು ನ್ಯಾಯಾಂಗ ತನಿಖೆಗೆ ಒಳಪಡಿಸಬಹುದು ಎಂಬ ಬಗ್ಗೆ ತಮಗೆ ಅನುಕೂಲವಾಗುತ್ತದೆ. ಇದರಿಂದಾಗಿ ಸಾರ್ವಜನಿಕರಿಗೂ ಕೂಡ ಗೊತ್ತಾಗುತ್ತದೆ. ಆದ್ದರಿಂದ ಈ ಚರ್ಚೆಗೆ ಅವಕಾಶ ಮಾಡಿ ಕೊಡಿ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಗೃಹ ಮಂತ್ರಿಗಳು ಈಗಾಗಲೇ ನ್ಯಾಯಾಂಗ ತನಿಖೆಗೆ ಕೊಟ್ಟಿದ್ದೇನೆ ಇಲ್ಲಿ ಚರ್ಚೆ ಮಾಡುವುದು ಅವಶ್ಯವಿಲ್ಲವೆಂದು ಹೇಳಿದರು.

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಅವರು ಹಾಗೆ ಹೇಳಲಿಲ್ಲ ಅವಕಾಶ ಇದೆಯೋ ಇದ್ದರೆ ಕೊಡಿ ನನ್ನದೇನೂ ಅಭ್ಯಂತರವಿಲ್ಲವೆಂದು ಹೇಳಿದರು.

ಶ್ರೀ ಜಗದೀಶ್ ಶೆಟ್ಟರ್ : ಮತ್ತೆ ಅದು ಅದೇ ರೀತಿ ಅರ್ಥ ಆಗುತ್ತದೆ. ನ್ಯಾಯಾಂಗ ತನಿಖೆಗೆ ಯಾವ ಟರ್ಮ್ಸ್ ಆಫ್ ರೆಫರೆನ್ಸ್ ಕಳುಹಿಸಿದ್ದಾರೋ ಎನ್ನುವುದನ್ನು ಡಿಸ್‌ಕ್ಲೋಸ್ ಮಾಡಿಲ್ಲ. ಅವರು ಅದನ್ನು ಮಾಡಲಿ. ಇಂಥ ಘಟನೆ ನಡೆದಂಥ ಸಂದರ್ಭದಲ್ಲಿ ನ್ಯಾಯಾಂಗ ತನಿಖೆ ಎಂದು ಹೇಳಿ ಮುಂದೆ ಸದನದಲ್ಲಿ ಚರ್ಚೆ ಮಾಡುವ ಅವಕಾಶ ಕಳೆದು ಕೊಳ್ಳುವಂತಾಗಬಹುದು. ಆದರ ಹಿನ್ನೆಲೆ ಎನ್ನುವಂಬುದು ಸರ್ಕಾರಕ್ಕೆ ಗೊತ್ತಾಗಬೇಕಾಗುತ್ತದೆ ಬಹುಶಃ ಸರ್ಕಾರದ ಕಡೆ ಹಾಗೂ ಗೃಹ ಮಂತ್ರಿಯವರ ಕಡೆ ಒಂದು ಸೈಡ್ ವರದಿ ಬಂದಿರುತ್ತದೆ, ಆದರೆ ಜನರ ಕಡೆ ಅಲ್ಲಿ ನಿಜವಾದ ಘಟನೆ ಏನು ನಡೆದಿದೆ ಆ ಬಗ್ಗೆ ಬೆಳಕನ್ನು ಚೆಲ್ಲುವುದಕ್ಕೆ ಈ ಸದನದಲ್ಲಿ ಅವಕಾಶವಿದೆ. ಆದ್ದರಿಂದ ಚರ್ಚೆಗೆ ಅವಕಾಶ ಕೊಡಿ, ಚರ್ಚೆಯನ್ನು ತೆಗೆದುಕೊಂಡು

ನಾಳೆ ದಿವಸ ನೀವು ಟರ್ಮ್ಸ್ ಆಫ್ ರೆಫೆರೆನ್ಸ್ ಕಳುಹಿಸಬಹುದು, ಇದರಲ್ಲಿ ಯಾರ್ಯಾರು ಇದ್ದಾರೆ? ಆ ಸರ್ಕಾಲ್ ಇನ್ಸ್‌ಪೆಕ್ಟರ್ ಒಬ್ಬನೇ ಇದ್ದಾನೋ ಹೇಗೆ, ಆ ಗೋಲಿಬಾರ್ ಮಾಡುವ ಅವಶ್ಯಕತೆ ಇತ್ತೋ ಹೇಗೆ? ಇವೆನ್ನೆಲ್ಲಾ ಸದನದಲ್ಲಿ ಚರ್ಚೆ ಮಾಡಬೇಕಾಗುತ್ತದೆ.

ಅಧ್ಯಕ್ಷರು : ಸರ್ಕಾರದವರು ಈಗಾಗಲೇ ಈ ವಿಚಾರವನ್ನು ರೆಫರ್ ಮಾಡಿದ್ದಾರೆ. They are about to order either to-day or tomoorow. They may order either to-day or tomorrow. ಸಾಧ್ಯವಾದಷ್ಟು ನೀವು ಜ್ಯುಡಿಷಿಯಲ್‌ಗೆ ಇನ್‌ವ್ಹೊಯೆನ್ಸ್ ಮಾಡದ ಹಾಗೆ ಸೂಕ್ಷ್ಮವಾಗಿ ಹೇಳಿ.

ಶ್ರೀ ಜಗದೀಶ್ ಶೆಟ್ಟರ್ : ಆ ಇನ್‌ವೆಸ್ಟಿಗೇಷನ್‌ಗೆ ಪೂರಕವಾಗಿ ನಾವು ಮಾತನಾಡುತ್ತೇವೆ. ಮತ್ತು ಸರ್ಕಾರದ ವೈಫಲ್ಯದ ಬಗ್ಗೆ ನಾವು ಮಾತನಾಡುತ್ತೇವೆ, ಆ ಇಲಾಖೆಯ ವೈಫಲ್ಯಗಳ ಬಗ್ಗೆ ನಾವು ಮಾತನಾಡಬೇಕಾಗುತ್ತದೆ.

ಅಧ್ಯಕ್ಷರು : ಸರ್ಕಾರದ ವೈಫಲ್ಯದ ಬಗ್ಗೆ ಮಾತನಾಡಲು ಅವರೇನೂ ಬೇಡ ಎಂದು ಹೇಳಿಲಿಲ್ಲವಲ್ಲಾ. ಆದರ ಬಗ್ಗೆ ಮಾತನಾಡಿ.

ಶ್ರೀ ಜಗದೀಶ್ ಶೆಟ್ಟರ್ : ಅದರ ಬಗ್ಗೆನೂ ಮಾತನಾಡುತ್ತೇವೆ. ಈ ಗೋಲಿಬಾರ್ ತಪ್ಪಿಸಬಹುದಾಗಿತ್ತಲ್ಲವೆ? ನಾಲ್ಕು ಜನ ಅಮಾಯಾಕರು ಸತ್ತರು, ಇವತ್ತು ಇನ್ನೂ 3-4 ಜನ ಆಸ್ಪತ್ರೆಯಲ್ಲಿ ಚಿಂತಾಜನಕ ಪರಿಸ್ಥಿತಿಯಲ್ಲಿದ್ದಾರೆ. ಇವತ್ತು ಗೋಲಿಬಾರ್ ಮಾಡುವ ಅವಶ್ಯಕತೆ ಇತ್ತೋ ಹೇಗೆ? ಅಲ್ಲಿ ನಾಲ್ಕೈದು ಸಾವಿರ ಜನರುಗಳು ಸೇರಿದಂಥ ಸಂದರ್ಭದಲ್ಲಿ ಎಸ್‌ಪಿಯವರು ಸ್ವತಃ ಅಲ್ಲಿಗೆ ಹೋಗಿದ್ದಾಗ, ಅಲ್ಲಿಯ ನಾಗರೀಕರದ್ದು ಒಂದೇ ಒಂದು ಬೇಡಿಕೆ ಇತ್ತು, ಅದೇ ಏನೆಂದರೆ, ಅಲ್ಲಿರುವ ಸರ್ಕಾಲ್ ಇನ್ಸ್‌ಪೆಕ್ಟರ್‌ರವರನ್ನು ಸಸ್ಪೆಂಡ್ ಮಾಡಿ ಅವನ ಮೇಲೆ ಕಾನೂನಿನಂತೆ ಕ್ರಮ ಕೈಗೊಳ್ಳಿ ಎನ್ನುವ ಒಂದೇ ಒಂದು ಬೇಡಿಕೆ ಇತ್ತು. ಮೇಲ್ನೋಟಕ್ಕೆ ಆ ಎಲ್ಲಾ ಸಂಶಾಯಾಸ್ಪದಗಳು ಅಲ್ಲಿ ಇದ್ದವು. ಅಂಥ ಸಂದರ್ಭದಲ್ಲಿ ಅಲ್ಲಿರುವ ಜನಗಳಿಗೆ ಸಮಾಧಾನ ಹೇಳುವಂಥ ಕೆಲಸ ಎಸ್‌ಪಿ ಮಾಡಬೇಕಾಗಿತ್ತು. ಲಾಠಿಪ್ರಹಾರ, ಆಶ್ರುವಾಯು ಪ್ರಯೋಗ, ಮತ್ತು ಗೋಲಿಬಾರ್ ಇವು ಕೇವಲ 15 ರಿಂದ 20 ನಿಮಿಷದಲ್ಲಿ ಮುಗಿದು ಹೋಗಿವೆ. ಜನರನ್ನು ಸಮಾಧಾನ ಮಾಡುವ ಕೆಲಸ, ಅವರನ್ನು ಚದುರಿಸುವಂಥ ಕೆಲಸ ಅಲ್ಲಿದ್ದಂಥ ಹಿರಿಯ ಪೊಲೀಸ್ ಅಧಿಕಾರಿಗಳು ಮಾಡಲಿಲ್ಲ. ಮೊಟ್ಟ ಮೊದಲು ಲಾಠಿ ಪ್ರಹಾರ ಆಗಬೇಕಾಗಿತ್ತು, ಲಾಠಿ ಪ್ರಹಾರ ಆಗಲಿಲ್ಲ, ಆಶ್ರುವಾಯು ಪ್ರಯೋಗ ಮಾಡಿದ ಮೇಲೆ ಜನರು ಚದುರದಿದ್ದರೆ ನಂತರ ಗೊಲಿಬಾರ್ ಮಾಡಬೇಕಾಗಿತ್ತು. ಅದನ್ನು ಮಾಡಲಿಲ್ಲ, ಗೋಲಿಬಾರ್ ಮಾಡುವುದಕ್ಕಿಂತಲೂ ಮುಂಚೆ ಅನೌನ್ಸ್‌ಮೆಂಟ್ ಮಾಡಬೇಕಾಗಿತ್ತು ಅದನ್ನು ಮಾಡಲಿಲ್ಲ. ಆಶ್ರುವಾಯು ಪ್ರಯೋಗ ಮತ್ತು ಗೋಲಿಬಾರ್ ಎರಡೂ ಒಂದು ಸಮಯಕ್ಕೆ ಆಗಿವೆ. ಏಕದಂ ಒಂದೇ ಸಲ ಆಗಿದೆ. ಎಲ್ಲಿ ಗುಂಡು ಬಿದ್ದಿವೆ ಎಂದರೆ, ತಲೆಗೆ, ಬಾಯಿಗೆ, ಕೈಗೆ, ಇಂಥ ಕಡೆ ಗುಂಡುಗಳು ಬಿದ್ದಿವೆ.

ಶ್ರೀ ಡಿ.ಬಿ. ಚಂದ್ರೇಗೌಡ : ಪಾಯಿಂಟ್ ಆಫ್ ಆರ್ಡರ್.

ಶ್ರೀ ಪಿ.ಜಿ.ಆರ್. ಸಿಂಧ್ಯ : ಖಂಡಿತವಾಗಲೂ ಸರ್ಕಾರಕ್ಕೆ ಇದು ಶೋಭೆ ತರತಕ್ಕಂಥ ವಿಚಾರ ಅಲ್ಲ, ಇದನ್ನು ನೀವು ವೆಲ್‌ಕಂ ಮಾಡಬೇಕಾಗಿತ್ತು. ಮಾನ್ಯ ಚಂದ್ರೇಗೌಡರವರು

ಹಿರಿಯ ಸಂಸದೀಯ ಪಟುಗಳು, ವಿರೋಧ ಪಕ್ಷದ ನಾಯಕರಾಗಿ ಹಾಗೂ ಸ್ಪೀಕರ್ ಆಗಿ ಕೆಲಸ ನಿರ್ವಹಿಸಿದಂಥವರು, ತಾವು ಹೀಗೆ ಮಾಡಿದರೆ ಹೇಗೆ?

ಶ್ರೀ ಡಿ.ಬಿ. ಚಂದ್ರೇಗೌಡ : ನಾನು ಹೇಳುವುದಕ್ಕೆ ಅವಕಾಶ ಇಲ್ಲವೆಂದು ಹೇಳಿದರೆ ನಾನು ಕುಳಿತುಕೊಂಡು ಬಿಡುತ್ತೇನೆ, ಇದರಲ್ಲಿ ನನ್ನದೇನೂ ಇಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ : ನಾನು ನಿಮಗೆ ಪ್ರಾಮಾಣಿಕವಾಗಿ ಹೇಳಬಯಸುತ್ತೇನೆ, ನೀವು ಅನಾವಶ್ಯಕವಾಗಿ ಅದಕ್ಷ ಅಧಿಕಾರಿಗಳಿಗೆ, ದುಷ್ಟ ಅಧಿಕಾರಿಗಳಿಗೆ ಪ್ರೋತ್ಸಾಹ ಕೊಟ್ಟ ಹಾಗೆ ಆಗುತ್ತದೆ. ಇಂಥ ಗಹನವಾದ ವಿಚಾರದ ಬಗ್ಗೆ ಈ ಸದನದಲ್ಲೂ ಚರ್ಚೆ ಮಾಡಬಾರದು ಎಂದರೆ ನಾನು ಇನ್ನೆಲ್ಲಿ ಮಾತನಾಡಬೇಕು ಹೇಳಿ? I am very sorry.

ಅಧ್ಯಕ್ಷರು : ಮಾನ್ಯ ಸಿಂಧ್ಯಾರವರೇ ಮಾನ್ಯ ಸಂಸದೀಯ ಸಚಿವರು ಮಾತನಾಡಲಿ, ತಾವು ಹೇಳಿ.

Sri D.B. Chandre Gowda : Very sorry, ಎಂದು ನೀವು ಹೇಳಿಕೊಳ್ಳಿ, ಅದಕ್ಕೆ ನಾವೇನು ಮಾಡುವುದಕ್ಕಾಗುತ್ತದೆ, ನಾವು ಹೇಳುವುದು ಬೇಡವೆ? ಎಲ್ಲಾ ನೀವೇ ಹೇಳುವುದಾದರೆ ಅದಕ್ಕೆ ನಾವು ಹೇಳುವುದು ಬೇಡವೆ? ಸನ್ಮಾನ್ಯ ಸಭಾಧ್ಯಕ್ಷರೆ, ಇದು ಬಹಳ ಗಂಭೀರವಾದ ವಿಚಾರ. ಈ ವಿಚಾರವನ್ನು ಸದನದಲ್ಲಿ ಚರ್ಚೆ ಮಾಡಬೇಕೇ ಅಥವಾ ಬೇಡವೇ ಎನ್ನುವುದು ತಾವು ಅಪ್ಪಣೆ ಕೊಟ್ಟರೆ ಮಾಡೋಣ ಇಲ್ಲದಿದ್ದರೆ ಬೇಡ. ಆದರೆ ಮೂಲ ಪ್ರಶ್ನೆ ಏನೆಂದರೆ, ಶೂನ್ಯ ವೇಳೆಯಲ್ಲಿ ಯಾವುದೇ, ನಿಯಮದ ವ್ಯಾಪ್ತಿಯಲ್ಲಿ ಇದು ಬರುವುದಿಲ್ಲ. ಮಾನ್ಯ ಸಿಂಧ್ಯಾರವರು ರೂಲ್ 69ರಡಿಯಲ್ಲಿ ನೋಟಿಸ್ ಕೊಟ್ಟಿದ್ದಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ನಾನು ತಮ್ಮ ಗಮನಕ್ಕೆ ತರುವುದೇನೆಂದರೆ, ನಿಯಮ 69ರಡಿಯಲ್ಲಿ ಹಾಗೂ ಶೂನ್ಯವೇಳೆಯಲ್ಲೂ ಸಹ ಪ್ರಸ್ತಾಪ ಮಾಡುವುದಕ್ಕೆ ಕಳುಹಿಸಿದ್ದೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : ನನ್ನ ಪಾಯಿಂಟ್ ಆಫ್ ಆರ್ಡರ್ ಏನೆಂದರೆ, ಶೂನ್ಯ ವೇಳೆಯ ವ್ಯಾಪ್ತಿ ಏನಿದೆ ಎಂಬುದನ್ನು ನಾವು ನಿರ್ಧಾರ ಮಾಡಿಲ್ಲ. ಯಾವ ವಿಚಾರವನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಬೇಕು ಎನ್ನುವುದು ಬಹಳ ಪ್ರಮುಖವಾದ ವಿಷಯ. ಮಾನ್ಯ ವಿರೋಧ ಪಕ್ಷದ ನಾಯಕರು ಈಗಾಗಲೇ ಹೇಳಿದ ಹಾಗೆ ಗೋಲಿಬಾರ್‌ಗೂ ಮತ್ತು ಲಾಠಿ ಚಾರ್ಜು ಮಾಡುವುದಕ್ಕೆ ಮಧ್ಯೆ 15 ನಿಮಿಷ ಅವಕಾಶ ಇರಲಿಲ್ಲ ತಕ್ಷಣ ಮಾಡಿದರು, it is exactly what the Judicial Enquiry has to come out in some form or the other. ಅದನ್ನು ಇಲ್ಲೂ ಚರ್ಚೆ ಮಾಡುವುದು, ನ್ಯಾಯಾಂಗ ತನಿಖೆಗೆಂದು ಒಪ್ಪಿಸಿದ ಮೇಲೆ ಅದೇ ವಿಚಾರದಲ್ಲಿ ಇಲ್ಲಿ ಚರ್ಚೆ ಮಾಡುವುದರಿಂದ, ಈ ತನಿಖೆಗೆ ತೊಂದರೆಯಾಗಬಹುದು ಅಥವಾ ತನಿಖೆಗೆ ಇನ್‌ಫ್ಲೂಯೆನ್ಸ್ ಮಾಡಬಹುದು. ಇಂಥ ವಿಚಾರಗಳಿಗೆ ಚರ್ಚೆಗೆ ಯಾವುದಾದರೂ ಒಂದು ನಿಯಮದಡಿಯಲ್ಲಿ ಕಳುಹಿಸಿದರೆ, ಮಾನ್ಯ ಸಿಂಧ್ಯರವರು ಹೇಳಿದ ಹಾಗೆ ನಿಯಮ 69ರ ಅಡಿಯಲ್ಲಿ ತೆಗೆದುಕೊಂಡರೆ ಅದರ ವ್ಯಾಪ್ತಿ ಎಷ್ಟು ಎಂದು ಹೇಳಬಹುದು. ಆದರೆ, ಸದರಿ ವಿಷಯವನ್ನು ಶೂನ್ಯ ವೇಳೆಯಲ್ಲಿ ತೆಗೆದುಕೊಂಡರೆ ಹೇಗೆ? ಇದರ ಬಗ್ಗೆ ನನಗೇನೂ ಗೊತ್ತಿಲ್ಲ. ತಾವೇನು ಹೇಳುತ್ತೀರೋ ಹೇಳಿ?

ಅಧ್ಯಕ್ಷರು : ನೀವು ಹೇಳಿದ ನಂತರ ನಾನು ಹೇಳುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : ಇಂಥ ವಿಚಾರಗಳನ್ನು ಶೂನ್ಯ ವೇಳೆಯಲ್ಲಿ ತೆಗೆದುಕೊಳ್ಳುವುದಕ್ಕೆ ನನ್ನದು ಅಭ್ಯಂತರ ಇದೆ. ತಾವು ಇದರ ಮೇಲೆ ನಿರ್ಣಯ ಕೊಡಬಹುದು. ಯಾವುದಾದರೊಂದು ನಿಯಮದ ಮೇಲೆ ಪ್ರಸ್ತಾಪ ಮಾಡಿದರೆ, ಅದರ ಮೇಲಾದರೂ ನಾವು ಚರ್ಚೆ ಮಾಡಬಹುದು. ಈಗ ಯಾವುದು ಬರುತ್ತದೆ ಯಾವುದು ಬರುವುದಿಲ್ಲ ಎನ್ನತಕ್ಕಂಥದನ್ನು ನೋಡಬೇಕು. ಆದರೆ, ಶೂನ್ಯ ವೇಳೆಯಲ್ಲಿ ಇದನ್ನು ಪ್ರಸ್ತಾಪ ಮಾಡುವುದು ಸರಿಯಲ್ಲ. ಈ ವಿಚಾರವನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡುವುದಕ್ಕೆ ಅನುಮತಿ ಕೊಡುವುದರಿಂದ ಏನು ತೊಂದರೆ ಆಗುತ್ತದೆ ಎಂದರೆ, ಇದು ಯಾವ ನಿಯಮದ ವ್ಯಾಪ್ತಿಗೂ ಬರುವುದಿಲ್ಲ. This is a very important matter. ಇದಕ್ಕೆ ಸರ್ಕಾರ ಉತ್ತರ ಕೊಡುವುದಕ್ಕೂ ಸಹ ಬರುವುದಿಲ್ಲ. ಒಂದು ವೇಳೆ ಉತ್ತರ ಕೊಟ್ಟರೆ ಕೊಡಬಹುದು ಅಥವಾ ಉತ್ತರ ಕೊಡದೇ ಇರಬಹುದು. ಇದರ ಬಗ್ಗೆ ಚರ್ಚೆ ಮಾಡುವುದಾದರೆ, ಯಾವುದಾದರೊಂದು ನಿಯಮದ ಅಡಿಯಲ್ಲಿ ಚರ್ಚೆ ಮಾಡೋಣ. ಇದಕ್ಕೆ ನನ್ನದೇನೂ ಅಭ್ಯಂತರವಿಲ್ಲ. ಆದರೆ ಇಂಥ ಪ್ರಾಮುಖ್ಯವಾದ ವಿಚಾರವನ್ನು ಶೂನ್ಯ ವೇಳೆಯ ಹೆಸರಿನಲ್ಲಿ ಚರ್ಚೆಗೋಸ್ಕರ ಚರ್ಚೆ ಮಾಡುವುದು ಕೇವಲ ಚರ್ಚೆ ಆಗುತ್ತಿದೆಯೇ ವಿನಃ ಅದಕ್ಕೆ ಎಷ್ಟು ಗಂಭೀರತೆ ಕೊಡಬೇಕಾಗಿತ್ತೋ ಅಷ್ಟು ಗಂಭೀರತೆ ಬರುವುದಿಲ್ಲ. ಜೊತೆಗೆ ಸರ್ಕಾರ ಉತ್ತರ ಕೊಡಲೇ ಬೇಕೆಂದು ತಾವು ಒತ್ತಾಯ ಮಾಡುವುದುಕ್ಕೂ ಕೂಡ ಆಗುವುದಿಲ್ಲ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಶೂನ್ಯ ವೇಳೆ ಬಗ್ಗೆ ಮಾನ್ಯ ಕಾನೂನು ಸಚಿವರು ಹೇಳಿದ್ದಾರೆ. ಬಹುಶಃ ಈ ಸದನದ ಹಿಂದಿನ ಪ್ರೊಸಿಡಿಂಗ್ಸ್ ಅನ್ನು ತಾವು ತೆಗೆದು ನೋಡಬೇಕು. ಸನ್ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಮತ್ತು ಸನ್ಮಾನ್ಯ ಚಂದ್ರೇಗೌಡರು ವಿರೋಧಪಕ್ಷದ ನಾಯಕರಾಗಿ ಕೆಲಸ ಮಾಡಿದ್ದಾರೆ. ಆ ಸಂದರ್ಭದಲ್ಲಿ ಯಾವ್ಯಾವ ವಿಷಯವನ್ನು ತೆಗೆದುಕೊಂಡು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಿದ್ದೀರಿ ಎನ್ನತಕ್ಕಂಥದ್ದು ನನಗೆ ಗೊತ್ತಿದೆ. ಹಿಂದೆ ಒಂದು ವಿಷಯದ ಮೇಲಿನ ಚರ್ಚೆ ಇಡೀ ಒಂದು ದಿವಸ ನಡೆದಿದೆ. ಒಂದು ಸಾರ್ವಜನಿಕ ಮಹತ್ವವಾದ ವಿಷಯವನ್ನು ತುರ್ತಾಗಿ ಚರ್ಚೆ ಮಾಡತಕ್ಕಂಥ ಸಂದರ್ಭ ಬಂದಾಗ ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಲೇ ಬೇಕಾಗುತ್ತದೆ. ಲೋಕಸಭೆಯಲ್ಲಿ ಒಂದೊಂದು ವಿಷಯದ ಮೇಲೆ ಶೂನ್ಯ ವೇಳೆಯಲ್ಲಿ ಒಂದು ದಿವಸ ಚರ್ಚೆಯಾಗಿರತಕ್ಕಂಥ ಉದಾಹರಣೆಗಳಿವೆ. ಅದೇ ರೀತಿಯ ಸಂಪ್ರದಾಯ ಇಲ್ಲಿಯೂ ಆಗಿದೆ. ಸಂಪ್ರದಾಯವನ್ನು ಮೀರಿ ರೂಲ್ಸ್‌ನ್ನು ಹೇಳುತ್ತಾ ಇದು ಕಾನೂನಿನ ಚೌಕಟ್ಟಿನೊಳಗೆ ಬರುವುದಿಲ್ಲ, ಇದನ್ನು ಹೇಗೆ ಮಾಡಬೇಕು ಎನ್ನತಕ್ಕಂಥದ್ದು ಇದು ನಿಮ್ಮ ಕಾನೂನಿನ ವ್ಯಾಪ್ತಿಗೆ ಬರುತ್ತದೆ. ಇದು ಬಹಳ ಸಾರ್ವಜನಿಕ ಮಹತ್ವದ ವಿಚಾರವಾಗಿದೆ. ಹಾಗೆಯೇ ಇದರಲ್ಲಿ ಸರ್ಕಾರದ ಮತ್ತು ಪೊಲೀಸ್ ಇಲಾಖೆಯ ವೈಫಲ್ಯತೆ ಎದ್ದು ಕಾಣುತ್ತದೆ. ನ್ಯಾಯಾಂಗ ತನಿಖೆ ಆಗುತ್ತಿದೆ ಎನ್ನತಕ್ಕಂಥ ಒಂದು ನೆಪದಲ್ಲಿ ಇಲ್ಲಿ ಚರ್ಚೆಗೆ ಅವಕಾಶ ಆಗದೇ ಇರತಕ್ಕಂಥದ್ದು ಆಗುವುದು ಬೇಡ.

ಅಧ್ಯಕ್ಷರು : ಶೂನ್ಯ ವೇಳೆಯ ವ್ಯಾಪ್ತಿ ಏನಿದೆ ಎನ್ನತಕ್ಕಂಥದರ ಬಗ್ಗೆ ಈಗಾಗಲೇ ಬೇರೆ ಬೇರೆ ಪುಸ್ತಕಗಳ ರೂಲ್ಸ್‌ನ್ನು ಸಾರ್ಟ್‌ಔಟ್ ಮಾಡಲಾಗುತ್ತಿದೆ. I will give a ruling tomorrow or day-after tomorrow. Somehow I have permitted him to raise this subject

ಶ್ರೀ ಡಿ.ಬಿ. ಚಂದ್ರೇಗೌಡ : ಇದಕ್ಕೆ ನನ್ನ ಅಬ್ಜಕ್ಷನ್ ಇಲ್ಲ. ನನ್ನ ಒಂದೇ ಒಂದು ಪ್ರಶ್ನೆ ಏನೆಂದರೆ,

Mr. Speaker : I will give my ruling tomorrow or day-after tomorrow. I will give my ruling.

ಶ್ರೀ ಡಿ.ಬಿ. ಚಂದ್ರೇಗೌಡರು : ಶೂನ್ಯ ವೇಳೆಯಲ್ಲಿ ಏನು ಮಾಡಬೇಕು? ಸಂಬಂಧ ಪಟ್ಟಂಥ ಸದಸ್ಯರು ವಿಷಯವನ್ನು ಸಭೆಯ ಗಮನಕ್ಕೆ ತರಬೇಕಷ್ಟೆ. ಆದರೆ, ಸರ್ಕಾರದ ಗಮನಕ್ಕೆ ಅಲ್ಲ. That is the concept of Zero Hour. ಈಗ ಸದನದ ಗಮನಕ್ಕೆ ತಂದಾಯಿತು. ಇದಕ್ಕೆ ಮಂತ್ರಿಗಳು ಉತ್ತರ ಕೊಡಬೇಕಾಗಿಲ್ಲ.

ಶ್ರೀ ಜಗದೀಶ್ ಶೆಟ್ಟರ್ : ರೂಲ್ಸ್ ಇರುತ್ತದೆ. ಆದರೆ, ಹಿಂದಿನ ಸಂಪ್ರದಾಯ ಏನಿದೆ ಎನ್ನತಕ್ಕಂಥದ್ದನ್ನು ಸಹ ನೋಡಬೇಕಾಗುತ್ತದೆ.

ಶ್ರೀ ಡಿ.ಬಿ. ಚಂದ್ರೇಗೌಡ : ತಾವು ಲೋಕಸಭೆಯಲ್ಲಿ ನಡೆದಿರುವ ಚರ್ಚೆ ಬಗ್ಗೆ ಪ್ರಸ್ತಾಪ ಮಾಡಿದ್ದೀರಿ. I was a member of both the Houses - Lok Sabha and Rajya Sabha. ಶೂನ್ಯ ವೇಳೆಯಲ್ಲಿ ಏನು ಮಾಡುತ್ತಾರೆ ಎಂದರೆ, ವಿಷಯವನ್ನು ಬರೆದುಕೊಂಡು ಬಂದು ಸಭೆಯ ಮುಂದೆ ಓದುತ್ತಾರಷ್ಟೆ.

ಶ್ರೀ ಜಗದೀಶ್ ಶೆಟ್ಟರ್ : ಈ ರೀತಿಯಾಗಿ ಈ ಸದನದಲ್ಲಿಯೂ ಮತ್ತು ಪಾರ್ಲಿಮೆಂಟ್‌ನಲ್ಲಿಯೂ ಕೂಡ ಆಗಿದೆ. ನೀವು ವಿರೋಧಪಕ್ಷದ ಸ್ಥಾನದಲ್ಲಿದ್ದಾಗಲೂ ಸಹ ಆಗಿದೆ. ಆದರೆ, ಈಗ ಆ ಕಡೆ ಹೋದ ಮೇಲೆ ರೂಲ್ಸ್ ಬದಲಾವಣೆ ಮಾಡುತ್ತಿದ್ದೀರಿ. ಶೂನ್ಯ ವೇಳೆಯಲ್ಲಿ ಬಹಳಷ್ಟು ವಿಷಯಗಳನ್ನು ಪ್ರಸ್ತಾಪ ಮಾಡಲಾಗಿದೆ.

ಶ್ರೀ ಡಿ.ಬಿ. ಚಂದ್ರೇಗೌಡ : ನಿಮಗೆ ಅಡ್ಡಿ ಪಡಿಸಬೇಕೆಂಬುದು ನನ್ನ ಭಾವನೆ ಅಲ್ಲ. I am putting the records straight. What will happen about the Zero Hour? Either in Lok Sabha or in the Rajya Sabha being a member of both the Houses of those two responsible and respected Houses, ಅದನ್ನು ನಾವು ಫಾಲೋಮಾಡುತ್ತೇವೆ. ನಾನು ಈಗಾಗಲೇ ಹೇಳಿದ ಹಾಗೆ ಅಲ್ಲಿ ಶೂನ್ಯ ವೇಳೆಯಲ್ಲಿ ಸಂಬಂಧಪಟ್ಟವರು ಓದುತ್ತಾರೆ ಅಷ್ಟೆ.

ಅಧ್ಯಕ್ಷರು : ಸಭೆಯ ಗಮನಕ್ಕೆ ತರುತ್ತಿದ್ದಾರೆ. ಆದರೆ, ಉತ್ತರ ಕೊಡಬೇಕೆಂದು ಯಾವುದೇ ಕಾನೂನಿಲ್ಲ. You need not reply.

Sri D.B. Chandre Gowda :- That is all.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಹಿಂದೆ ಶೂನ್ಯ ವೇಳೆಯಲ್ಲಿ ಆಗಿರತಕ್ಕಂಥ ಪ್ರೊಸಿಡಿಂಗ್ಸ್ ಅನ್ನು ತೆಗೆದು ನೋಡಿದಾಗ ಹಿಂದೆ ಯಾವ ರೀತಿಯಾಗಿ ನಡೆದಿದೆ ಎನ್ನತಕ್ಕಂಥದ್ದು ಗೊತ್ತಾಗುತ್ತದೆ. ಹಿಂದಿನ ಸಂಪ್ರದಾಯವನ್ನೂ ಕೂಡ ನಾವು ಫಾಲೋ ಮಾಡಬೇಕಾಗುತ್ತದೆ.

ಅಧ್ಯಕ್ಷರು : ಇದಕ್ಕೆ ಸಂಬಂಧಪಟ್ಟಂಥ ವಿಷಯಗಳ ಬಗ್ಗೆ ನಾನು ಆಲೋಚನೆ ಮಾಡುತ್ತೇನೆ. ಹಾಗೆಯೇ ಬೇರೆ ಬೇರೆ ರೂಲ್ಸ್‌ನ್ನು ನೋಡಿ ಇನ್ನೊಂದು ದಿವಸ ರೂಲಿಂಗ್ ಕೊಡುತ್ತೇನೆಂದು ನಾನು ಈಗಾಗಲೇ ಹೇಳಿದ್ದೇನೆ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ನಾನು ಒಂದು ವಿಷಯವನ್ನು ಸಭೆಯ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಅದೇನೆಂದರೆ, ಸನ್ಯಾನ್ಯ ದೇವೇಗೌಡರು ಮತ್ತು ಅವರ ಮಕ್ಕಳ ವಿಷಯಕ್ಕೆ ಸಂಬಂಧಪಟ್ಟಂತೆ ಶೂನ್ಯವೇಳೆಯಲ್ಲಿ ಸುಮಾರು ಎರಡು ಗಂಟೆ ಕಾಲ ಚರ್ಚೆ ಮಾಡಲಾಗಿದೆ. ಬೇಕಾದರೆ ಪ್ರೋಸಿಡಿಂಗ್ಸ್ ತೆಗೆದು ನೋಡಬಹುದು. ಈ ವಿಷಯವನ್ನು ಏಕೆ ಎಲ್ಲಿ ಚರ್ಚೆ ಮಾಡುವುದಕ್ಕೆ ಆಗುವುದಿಲ್ಲ?

ಶ್ರೀ ಡಿ.ಬಿ. ಚಂದ್ರೇಗೌಡ : ಇದರಲ್ಲಿ ವಿಷಯದ ಗಾಂಭೀರತೆ ಇದೆ.

ಶ್ರೀ ಎಸ್.ಎಸ್. ಪಾಟೀಲ್ : ಇದು ಮಾತ್ರ ಗಂಭೀರವಾದ ವಿಷಯ. ಆಗ ಎರಡು ಗಂಟೆ ಕಾಲ ಚರ್ಚೆ ಮಾಡುವಾಗ ಅದು ಗಂಭೀರವಾದ ವಿಷಯವಲ್ಲವೆ?

ಶ್ರೀ ಡಿ.ಬಿ. ಚಂದ್ರೇಗೌಡ : ಗೋಲಿಬಾರ್‌ನಲ್ಲಿ ಸತ್ತಿರತಕ್ಕಂಥವರ ವಿಷಯವನ್ನು ಶೂನ್ಯವೇಳೆಯಲ್ಲಿ ಚರ್ಚೆ ಮಾಡುತ್ತೇವೆಂದು ಹೇಳಿದರೆ, ಇದನ್ನು ನಾವು ಏನೆಂದು ಹೇಳಬೇಕು?

ಶ್ರೀ ಕೆ.ಹೆಚ್. ರಂಗನಾಥ್ (ಅರಣ್ಯ ಜೀವ ಪರಿಸ್ಥಿತಿ ಮತ್ತು ಪರಿಸರ ಸಚಿವರು) : ಸನ್ಯಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧಪಕ್ಷದ ನಾಯಕರು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಅದಕ್ಕೆ ನಮ್ಮದೇನೂ ಅಭ್ಯಂತರವಿಲ್ಲ. ಸಭೆಯ ಗಮನಕ್ಕೆ ವಿಚಾರವನ್ನು ತಂದಿದ್ದಾರೆ. ಮಾನ್ಯ ಸಿಂಧ್ಯಾರವರು ನಿಯಮ 69ರ ಅಡಿಯಲ್ಲಿ ನೋಟೀಸ್ ಕೊಟ್ಟು ಇದರ ಬಗ್ಗೆ explanatory note ಅನ್ನು ಸಹ ಕೊಟ್ಟಿರುತ್ತಾರೆ. ಆದ್ದರಿಂದ ತಾವು ಅದನ್ನು ಪರಾಂಭರಿಸಿ, ಇದರ ಬಗ್ಗೆ ಅವಕಾಶ ಕೊಡಬಹುದು. ಶೂನ್ಯ ವೇಳೆ ಬೇಕೋ ಅಥವಾ ಬೇಡವೋ ಮತ್ತು ಎರಡು ಗಂಟೆ ಕಾಲ ಹಿಂದೆ ಚರ್ಚೆ ಆಗಿದೆ ಎನ್ನತಕ್ಕಂಥದಲ್ಲ ಈಗ ಬೇಡ. ಒಂದು ಸಾರಿ ತಪ್ಪು ಮಾಡಿ ಮತ್ತೆ ಇನ್ನೊಂದು ಸಾರಿ ಮಾಡಬೇಕೆಂದು ಎಲ್ಲಿಯಾದರು ಇದೆಯೇ?

Mr. Speaker : I think it is reasonable.

ಶ್ರೀ ಜಗದೀಶ್ ಶೆಟ್ಟರ್ : ತಮ್ಮ ಅಧಿಕಾರವಧಿಯಲ್ಲಿ ಸದರಿ ವಿಷಯವನ್ನು ಶೂನ್ಯ ವೇಳೆಯಿಂದ ನಿಯಮ 69ರ ಅಡಿಯಲ್ಲಿ ಕನ್ವರ್ಟ್ ಮಾಡಬಹುದು.

ಅಧ್ಯಕ್ಷರು : ಕನ್ವರ್ಟ್ ಮಾಡೋಣ. ಈಗ 69ರ ಅಡಿಯಲ್ಲಿ ಈಗಾಗಲೇ ಒಂದು ಪ್ರಸ್ತಾಪ ಇದೆ. ಇದು ಅದಮೇಲೆ ನಾವು ತೆಗೆದುಕೊಳ್ಳಬಹುದು.

ಶ್ರೀ ಕೆ.ಹೆಚ್. ರಂಗನಾಥ್ : ಮಾನ್ಯ ಅಧ್ಯಕ್ಷರೇ, ಈಗ ನಿಯಮ 69ರ ಅಡಿಯಲ್ಲಿ ಕನ್ವರ್ಟ್ ಮಾಡತಕ್ಕಂಥ ಅವಶ್ಯಕತೆ ಇಲ್ಲ. ಏಕೆಂದರೆ, ಅವರು ಈಗಾಗಲೇ ನಿಯಮ 69ರ ಅಡಿಯಲ್ಲಿ ನೋಟಿಸ್ ಕೊಟ್ಟಿದ್ದಾರೆ.

ಶ್ರೀ ಸಿ. ಬೈರೆಗೌಡ : ಮಾನ್ಯ ಅಧ್ಯಕ್ಷರೆ, ನಿಯಮ 69ರ ಅಡಿಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿ ಕೊಡಿ. ಇದಕ್ಕೆ ಸಂಬಂಧಪಟ್ಟಂತೆ ನಾವು ನಿಮಗೆ ಪತ್ರ ಕೊಟ್ಟಿದ್ದೇವೆ.

ಅಧ್ಯಕ್ಷರು : ನಿಯಮ 69ರ ಅಡಿಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಬಹುದೆಂದು ಮಾನ್ಯ ಮಂತ್ರಿಗಳು ಸಲಹೆ ಕೊಟ್ಟಿದ್ದಾರೆ.

ಶ್ರೀ ಸಿ. ಬೈರೆಗೌಡ : ಅದನ್ನು ತಾವು ಒಪ್ಪಿಕೊಳ್ಳಬಹುದು.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೆ, ನಿಯಮ 69ರ ಅಡಿಯಲ್ಲಾಗಲಿ ಅಥವಾ ಶೂನ್ಯ ವೇಳೆಯಲ್ಲಾಗಲಿ, ಒಟ್ಟಿನಲ್ಲಿ ಸದರಿ ವಿಷಯವನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಸ್ತಾಪ ಮಾಡಿದ್ದಾರೆ. ತಾವು ಅವಕಾಶ ಕೊಟ್ಟಿದ್ದರೆ ಇಷ್ಟು ಹೊತ್ತಿಗೆ ಚರ್ಚೆ ಮುಗಿದು ಹೋಗುತ್ತಿತ್ತು. ಅವರು ಈಗಾಗಲೇ ಪ್ರಸ್ತಾಪ ಮಾಡಿದ್ದಾರೆ. ತಾವು ದಯವಿಟ್ಟು ಅವಕಾಶ ಕೊಡಿ. ಜ್ಯುಡಿಶಿಯಲ್ ಎನಕ್ವೈರಿಗೆ ಯಾವುದೇ ರೀತಿಯ ತೊಂದರೆ ಆಗದ ರೀತಿಯಲ್ಲಿ ನಾವು ಮಾತನಾಡುತ್ತೇವೆ.

ಅಧ್ಯಕ್ಷರು : ಇದಕ್ಕೆ ಸರ್ಕಾರದವರು ಒಪ್ಪಿಕೊಳ್ಳಬೇಕು.

ಶ್ರೀ ಡಿ.ಬಿ. ಚಂದ್ರೇಗೌಡರು : ಇದಕ್ಕೆ ನಮ್ಮದೇನೂ ತಕರಾರು ಇಲ್ಲ. ಆದರೆ ನನ್ನ ಪಾಯಿಂಟ್ ಆಫ್ ಆರ್ಡರ್ ಏನೆಂದರೆ, ಇಂಥ ಮಹತ್ವದ ವಿಚಾರವನ್ನು ನಾವು ಗಂಭೀರವಾಗಿ ಚರ್ಚೆ ಮಾಡಬೇಕಾದರೆ ಕೆಲವೊಂದು ನಿಯಮಾವಳಿಯ ಅಡಿಯಲ್ಲಿ ಚರ್ಚೆ ಮಾಡಬೇಕು ಎನ್ನತಕ್ಕಂಥದ್ದು, ನನ್ನ ಬೇಸಿಕ್ ಪ್ರಶ್ನೆಯಾಗಿದೆ. ಶೂನ್ಯ ವೇಳೆಯಲ್ಲಿ ವಿಷಯ ಚರ್ಚೆ ಮಾಡುವುದಕ್ಕೆ ಆಗುವುದಿಲ್ಲ. ಏಕೆಂದರೆ, ಇದಕ್ಕೆ ಉತ್ತರ ಹೇಳಬೇಕೆಂದು ನಿಯಾಮವಳಿಯಲ್ಲಿ ಇಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) : ಮಾನ್ಯ ಅಧ್ಯಕ್ಷರೆ, ಅವರು ಹೇಳತಕ್ಕಂಥದ್ದು ಬೇರೆ. ಆದರೆ, ನನ್ನ ಅಬ್ಜಕ್ಷನ್ ಬೇರೆ. ನಾನು ಈ ಸಂದರ್ಭದಲ್ಲಿ ಹೇಳುವುದೇನೆಂದರೆ, ಈಗಾಗಲೇ ಇದನ್ನು ನ್ಯಾಯಾಂಗ ತನಿಖೆಗೆ ನಾನು ಒಪ್ಪಿಸಿದ್ದೇವೆ. ಒಬ್ಬ ಜಡ್ಜ್‌ನ್ನು ನೇಮಕ ಮಾಡಿ ಇದರ ಬಗ್ಗೆ ನ್ಯಾಯಾಂಗ ತನಿಖೆ ನಡೆಸಬೇಕೆಂದು ಮತ್ತು ಅಲ್ಲಿ ಆಗಿರತಕ್ಕಂಥ ಘಟನೆಯ ಬಗ್ಗೆ ಸಂಪೂರ್ಣವಾದ ಒಂದು ತನಿಖೆ ನಡೆಸಬೇಕೆಂದು ಹೈ ಕೋರ್ಟ್‌ಗೆ ಪತ್ರ ಬರೆದು ತಿಳಸಲಾಗಿದೆ. ಸದರಿ ಕೇಸ್‌ನ್ನು ನ್ಯಾಯಾಂಗ ತನಿಖೆಗೆ ಒಪ್ಪಿಸಿದ ಮೇಲೆ ಮತ್ತೆ ಈ ಸದನದಲ್ಲಿ ಚರ್ಚೆ ಮಾಡಬೇಕೇ ಅಥವಾ ಬೇಡವೇ ಎನ್ನತಕ್ಕಂಥದ್ದನ್ನು ತಮಗೆ ಬಿಟ್ಟ ವಿಷಯ. ಇದರ ಬಗ್ಗೆ ಚರ್ಚೆ ಮಾಡಬಹುದಾದರೆ ನನ್ನದೇನೂ ಅಭ್ಯಂತರವಿಲ್ಲ. ಆದಕ್ಕೆ ನಾನು ಅಡ್ಡಿ ಕೂಡ ಬರುವುದಿಲ್ಲ. ಆದರೆ, ನ್ಯಾಯಾಂಗ ತನಿಖೆಗೆ ವಹಿಸಿಕೊಟ್ಟ ಮೇಲೆ ಚರ್ಚೆ ಮಾಡುವುದಕ್ಕೆ ಆಗುವುದಿಲ್ಲ ಎಂದರೆ, ಚರ್ಚೆ ಮಾಡತಕ್ಕಂಥ ಅವಶ್ಯಕತೆ ಏನಿದೆ ಎನ್ನತಕ್ಕಂಥದ್ದು ನನ್ನ ಪ್ರಶ್ನೆಯಾಗಿದೆ.

ಶ್ರೀ ಜಗದೀಶ್ ಶೆಟ್ಟರ್ : ಈ ವಿಷಯ ಚರ್ಚೆಗೆ ಬರಬಾರದು ಎಂದು ಸರ್ಕಾರ ಈ ವಿಷಯವನ್ನು ಹೊರಕ್ಕೆ ಹಾಕುತ್ತಿದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಇದು ನಿಮಗೆ ಬಿಟ್ಟ ವಿಷಯ. ಒಂದು ವೇಳೆ ಚರ್ಚೆ ಮಾಡುವುದಕ್ಕೆ ಬರುತ್ತದೆ ಎಂದರೆ ನನ್ನದೇನೂ ಅಭ್ಯಂತರವಿಲ್ಲ. ಚರ್ಚೆ ಮಾಡಲು ಅವಕಾಶ ಇದ್ದರೆ, ಬೇಕಾದರೆ ಒಂದು ಅಥವಾ ಎರಡು ದಿವಸ ಮಾತನಾಡಿ. ಇದಕ್ಕೂ ಸಹ ನನ್ನದೇನು ಅಭ್ಯಂತರವಿಲ್ಲ.

ಶ್ರೀ ಜಗದೀಶ್ ಶೆಟ್ಟರ್ : ಇದಕ್ಕೆ ಸಂಬಂಧಪಟ್ಟಂತೆ ಇನ್ನು ಯಾವ ಜಡ್ಜ್‌ನ್ನು ಫಿಕ್ಸ್ ಮಾಡಿಲ್ಲ. ಹಾಗೆಯೇ ಇದಕ್ಕೆ ಸಂಬಂಧಪಟ್ಟಂತೆ ಪ್ರೋಸಿಡಿಂಗ್ಸ್ ಕೂಡ ಪ್ರಾರಂಭವಾಗಿಲ್ಲ. ಮತ್ತು ಇನ್‌ವೆಸ್ಟಿಗೇಶನ್ ಪ್ರೋಸಸ್ ಕೂಡ ಇನ್ನು ಚಾಲನೆ ಆಗಿಲ್ಲ. ಇಂಥ ಸಂದರ್ಭದಲ್ಲಿ ಚರ್ಚೆಗೆ ಅವಕಾಶವಿಲ್ಲವೆಂದು ಹೇಳಿದರೆ ಹೇಗೆ?

Mr. Speaker : The Government has already written to the High Court to appoint a Judge. That process is over. Government's process is over. It is left to the High Court to appoint or not.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಇನ್‌ವೆಸ್ಟಿಗೇಷನ್ ಪ್ರಾರಂಭವಾಗಬೇಕು ಮತ್ತು ಎವಿಡೆನ್ಸ್ ಕೂಡ ರೆಕಾರ್ಡ್ ಆಗಬೇಕು.

ಅಧ್ಯಕ್ಷರು : ಸರ್ಕಾರ ಏನು ಕೆಲಸ ಮಾಡಬೇಕು ಅದನ್ನು ಮಾಡಿದೆ. ಹೈಕೋರ್ಟ್ ಅದನ್ನು ಬೇಗನೆ ಮಾಡಬೇಕು.

ಶ್ರೀ ಜಗದೀಶ್ ಶೆಟ್ಟರ್ : ಈ ವಿಷಯ ಇನ್ನು ಜ್ಯುಡಿಷರಿಯಲ್ಲಿ ಪೆಂಡಿಂಗ್ ಇದೆ, ಆದ್ದರಿಂದ ಇಲ್ಲಿ ಯಾವುದೇ ವಿಷಯವನ್ನು ಮಾತನಾಡಬಾರದೆಂದು ಏನೂ ಇಲ್ಲ. ಇದಕ್ಕೆ ಪೂರಕವಾಗಿ ನಾವು ಮಾತನಾಡಬಹುದು.

ಅಧ್ಯಕ್ಷರು : ಈ ರೂಪದಲ್ಲಿ ಅಲ್ಲ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಶೂನ್ಯ ವೇಳೆಯಲ್ಲಿ ಮಾತನಾಡುವುದಕ್ಕೆ ಬರುವುದಿಲ್ಲವೆಂದು ಅವರು ಹೇಳುತ್ತಿದ್ದಾರೆ. ಇದು ಬಹಳ ಗಂಭೀರವಾದ ವಿಷಯವಾಗಿರುವುದರಿಂದ ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಬಹುದಾಗಿದೆ. ಇದೇ ರೀತಿ ಹಿಂದೆ ಆಗಿರತಕ್ಕಂಥ ಸಾಕಷ್ಟು ಸಂಪ್ರದಾಯಗಳಿವೆ. ಈ ಸಂದರ್ಭದಲ್ಲಿ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, ದಯವಿಟ್ಟು ತಾವು ಹಿಂದಿನ ದಿವಸಗಳಲ್ಲಿ ಶೂನ್ಯ ವೇಳೆಯಲ್ಲಿ ಚರ್ಚೆ ಆಗಿರತಕ್ಕಂಥ ರೆಕಾರ್ಡ್ಸ್‌ನ್ನು ತೆಗೆದು ನೋಡಿದರೆ ಈ ರೀತಿಯಾದ ಸಾಕಷ್ಟು ವಿಷಯಗಳು ಸಿಗುತ್ತವೆ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ವಿರೋಧಪಕ್ಷದಲ್ಲಿದ್ದಾಗ ಒಂದು ಅಥವಾ ಎರಡು ದಿವಸ ಚರ್ಚೆಆಗಿದೆ. ಆದರೆ ಅವರು ಈಗ ಹೇಳುತ್ತಿಲ್ಲ. ಸಾಕಷ್ಟು ವಿಷಯಗಳು ಇಡೀ ದಿವಸ ಶೂನ್ಯ ವೇಳೆಯಲ್ಲಿ ಚರ್ಚೆಯಾಗಿದೆ.

1.00 ಪಿ.ಎಂ.

ಆದರ ಬಗ್ಗೆ ಅವರು ಈಗ ಏನೂ ಹೇಳುತ್ತಿಲ್ಲ. ಹಿಂದಿನ ಸಭಾಧ್ಯಕ್ಷರು ಇಂಥವುಗಳನ್ನು ಅಲ್ಲಿ ಮಾಡಿರುವ ಸಾಕಷ್ಟು ಸಂಪ್ರದಾಯಗಳು ಇವೆ. ಇದನ್ನು ಶೂನ್ಯವೇಳೆಯಲ್ಲಿ ಚರ್ಚೆ ಮಾಡುವುದಕ್ಕೆ ಬರುವುದಿಲ್ಲವೆಂದು ಹೇಳುವುದು ಸರಿಯಲ್ಲ.

ಶ್ರೀ ಬಿ.ಸೋಮಶೇಖರ್ (ಮಳವಳ್ಳಿ) : ಮಾನ್ಯ ಸಭಾಧ್ಯಕ್ಷರೆ, ಈ ಘಟನೆ 5-6 ದಿವಸಗಳ ಹಿಂದೆ ನಡೆದಿದ್ದು 4-6 ಜನರ ಮೇಲೆ ಗುಂಡು ಹಾರಿಸಿದ್ದು ಇದೆ. ಅದು ಆದ ನಂತರ ನಮ್ಮ ಸದನ ಸೇರಿರುತ್ತದೆ. ಈ ಸರ್ಕಾರ ಬಂದಮೇಲೆ ಪೊಲೀಸ್‌ರಿಂದ ಗುಂಡು ಹಾರಿಸಿರುವ ಎರಡು ಅಥವಾ ಮೂರನೆಯ ಘಟನೆ ಇರಬಹುದು. ತಕ್ಷಣ ನ್ಯಾಯಾಂಗ ತನಿಖೆಗೆ ಘೋಷಣೆಯನ್ನು

ಮಾಡಿದ್ದೇವೆ ಆದ ಕಾರಣ ಈ ಸದನದಲ್ಲಿ ವಿಷಯವನ್ನು ಮಾತನಾಡಬಾರದೆಂದು ಈ ಒಂದು ನಿಲುವೇ ಹೇಗೆ?

ಸಭಾಧ್ಯಕ್ಷರು : ಮಾನ್ಯ ಗೃಹ ಸಚಿವರು ಮಾತನಾಡಬಾರದೆಂದು ಹೇಳಿರುವುದಿಲ್ಲ.

ಶ್ರೀ ಬಿ. ಸೋಮಶೇಖರ್ : ಸದನದಲ್ಲಿ ಯಾರೂ ಮಾತನಾಡಬಾರದೆಂದು ಈ ನಿಲುವು ತೆಗೆದುಕೊಂಡರೆ, ಮಾನ್ಯ ಖರ್ಗೆಯವರು ಹೇಳತಕ್ಕಂಥದ್ದು ನ್ಯಾಯಾಂಗ ತನಿಖೆಗೆ ಆದೇಶವನ್ನು ಮಾಡಿದಿರಿ, ಇವತ್ತು ಘೋಷಣೆಯನ್ನು ಮಾಡಿದ್ದಾರೆ, ಇನ್ನು ನ್ಯಾಯಾಂಗ ತನಿಖೆಗೆ ಆರ್ಡರ್ ಆಗಿಲ್ಲ, ಟರ್ಮ್ಸ್ ಆಫ್ ರೆಫರನ್ಸ್ ನಾವು ಕೊಟ್ಟಿಲ್ಲ. ಜ್ಯುಡಿಷಿಯಲ್ ಎನ್‌ಕ್ವೈರಿಯಲ್ಲಿ ಏನು ವಿಚಾರಣೆ ಮಾಡಬೇಕು, ಅದರ ಬಗ್ಗೆ ನಾವು ಚರ್ಚೆ ಮಾಡುವುದಿಲ್ಲ. ಅದು ಕಂಟೆಪ್ಟ್ ಆಗಬಹುದು. ಆದರೆ ನಾವು ಇಲ್ಲಿ ಚರ್ಚೆ ಮಾಡಬೇಕೆಂದಿರುವ ವಿಚಾರ, ಸರ್ಕಾರದ ವೈಫಲ್ಯ ಏತಕ್ಕೋಸ್ಕರ ಈ ಗೋಲಿಬಾರ್ ಆಯಿತು, ಈ ವೈಫಲ್ಯದ ಬಗ್ಗೆ ನಾವು ಸದನದಲ್ಲಿ ಚರ್ಚೆ ಮಾಡುವುದಕ್ಕಾಗುವಲ್ಲವೆಂದರೆ ಇದಕ್ಕೆ ಶೋಭೆ ತರುತ್ತದೆಯೇ ತಾವು ಹೇಳಿ?

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಸಭಾಧ್ಯಕ್ಷರೆ, ನೀವು ದಯಮಾಡಿ ತಪ್ಪು ತಿಳಿದುಕೊಂಡಿದ್ದೀರಿ. ಕನ್ವರ್ಟ್ ಮಾಡುವುದರ ಬಗ್ಗೆ, ಶೂನ್ಯ ವೇಳೆ ಬಗ್ಗೆ ಈ ರೂಲ್ಸ್ ಪುಸ್ತಕದಲ್ಲಿ ಎಲ್ಲಿದೆ. ಅಧ್ಯಕ್ಷರೆ, ಇದು ತಮ್ಮ ಡಿಸ್ಕ್ರಿಷನರಿಗೆ ಸಂಬಂಧಪಟ್ಟಂತಹ ವಿಚಾರ. ಯಾವುದೋ ಒಂದು ಸಮಸ್ಯೆ ಎತ್ತಿದ್ದೇವೆಂದು ಆಗಬಾರದು, ಅದಕ್ಕೆ ಒಂದು ಸೀರಿಯಸ್‌ನೆಸ್ ಇರಬೇಕು. ಯಾವುದಾದರೊಂದು ನಿಯಮದ ಮೇಲೆ, ಇಂತಹ ಗಂಭೀರವಾದ ವಿಷಯವನ್ನು ಚರ್ಚೆ ಮಾಡಿ ಎಂದು ನಾವು ಹೇಳಿದರೆ, ಶೂನ್ಯ ವೇಳೆಯಲ್ಲಿ ನೀವು ಎತ್ತಿದಂತಾಯಿತು, ಅದಕ್ಕೆ ಸೀರಿಯಸ್‌ನೆಸ್ ಇರುವುದಿಲ್ಲ. ನಮಗೆ ಇನ್ನೊಂದು ಅಬ್ಲಿಕ್ಷನ್ ಇದೆ, ಜ್ಯುಡಿಷಿಯಲ್ ಎನ್‌ಕ್ವೆಯರಿಗೆ ಆದೇಶವನ್ನು ಕೊಟ್ಟಿದ್ದೇವೆ, ಅದಕ್ಕೆ ಇನ್‌ಫ್ಲೂಯೆನ್ಸ್ ಆಗಬಾರದು, ಸರ್ಕಾರದ ವೈಫಲ್ಯದ ಬಗ್ಗೆ ಯಾರು ಚರ್ಚೆ ಮಾಡಬೇಡಿ ಎಂದು ಹೇಳಿದ್ದಾರೆ, ನೀವು ಇರುವುದು ಚರ್ಚೆ ಮಾಡುವುದಕ್ಕೆ ನಾವು ಅದನ್ನು ಸರಿಪಡಿಸಿಕೊಳ್ಳಬೇಕು. ಅದನ್ನು ಚರ್ಚೆಗೆ ಆಲಾ ಮಾಡುವುದು ಅಧ್ಯಕ್ಷರು. ನಮ್ಮ ಪುಸ್ತಕದಲ್ಲಿ ಶೂನ್ಯವೇಳೆಗೆ ರೆಕಾಗ್ನಿಷನ್ ಎನ್ನುವುದು ಎಲ್ಲೂ ಇಲ್ಲ. It is the discretion of the Chair. ಯಾವುದನ್ನು ಮಾಡಬಹುದು, ಯಾವುದನ್ನು ಬಿಡಬಹುದು, ಬಹಳ ಗಂಭೀರವಾಗಿ ಇರುವಂಥ ವಿಚಾರವನ್ನು ಶೂನ್ಯವೇಳೆಯಲ್ಲಿ ಚರ್ಚೆ ಮಾಡಿದರೆ ಪತ್ರಿಕೆಯಲ್ಲಿ ಮಾತ್ರ ಬರುತ್ತದೆ. is it all our purpose? ಗೋಲಿಬಾರ್ ಪ್ರಕರಣಗಳು ನಡೆದಿದೆ ಎಂದರೆ, ತನಿಖೆ ಯಾರಿಂದ ಆಗಬೇಕು, ಹೇಗೆ ಆಗಬೇಕು. What should be the terms of reference? ಸರ್ಕಾರದ ವೈಫಲ್ಯದ ಬಗ್ಗೆ ಚರ್ಚೆ ಮಾಡಬಾರದೆಂದು ನಾನು ಹೇಳಲಿಲ್ಲ. ಹಾಗೆಯೇ That should not ಇವೆಲ್ಲಾ ನಾವು ಅಲೋಚನೆ ಮಾಡಬೇಡವೇ? influence the judicial inquiry. This is all the two objections - substative objections. I seek the direction of the Chair.

ಶ್ರೀ ಡಿ.ವಿ. ಸದಾನಂದಗೌಡ : ನಮ್ಮ ಗೃಹ ಮಂತ್ರಿಗಳ ಅಲ್ಲಕ್ಷನ್ ಏನು ಎಂದರೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು) : ಮಾನ್ಯ ಅಧ್ಯಕ್ಷರೆ, ನನ್ನ ಅಬ್ಜಕ್ಷನ್ ಏನೂ ಇಲ್ಲ. ಇದನ್ನು ನ್ಯಾಯಾಂಗ ತನಿಖೆಗೆ ಒಪ್ಪಿಸಿದ್ದೇವೆ. ಇದನ್ನು ಚರ್ಚೆ ಮಾಡತಕ್ಕಂಥ ಅವಶ್ಯಕತೆ ಇದೆಯೇ ಎನ್ನತಕ್ಕಂಥದ್ದರ ಬಗ್ಗೆ ಅಧ್ಯಕ್ಷರ ಮುಂದೆ ಇಟ್ಟಿದ್ದೇವೆ. ಇದೆ ಎಂದರೆ ಚರ್ಚೆ ಮಾಡಲಿ, ಇಲ್ಲವೆಂದರೆ ಬಿಡಲಿ. ಅವರಿಗೆ ಬಿಟ್ಟಿರುವ ವಿಷಯ.

ಶ್ರೀ ಡಿ.ವಿ. ಸದಾನಂದಗೌಡ : ಇದು ಯಾವ ಸ್ಟೇಜ್‌ನಲ್ಲಿ ಇದೆ ಎನ್ನತಕ್ಕಂಥದ್ದು ಇಂಪಾರ್ಟೆಂಟ್ ಮಾನ್ಯ ಅಧ್ಯಕ್ಷರೆ, ಇದನ್ನು ನ್ಯಾಯಾಂಗ ತನಿಖೆಗೆ ಒಪ್ಪಿಸಬೇಕೆಂದು ಸರ್ಕಾರ ಒಪ್ಪಿಸಿದ ತಕ್ಷಣ ಆ ಪ್ರೋಸೆಸ್ ಸ್ಟಾರ್ಟ್ ಆಗುವುದಿಲ್ಲ. ನ್ಯಾಯಾಂಗ ತನಿಖೆಯ ಪ್ರೋಸೆಸ್ ಯಾವಾಗ ಪ್ರಾರಂಭವಾಗುತ್ತದೆಂದರೆ, ಅಲ್ಲಿ ಜಡ್ಜ್ ಅಪಾಯಿಂಟ್‌ಮೆಂಟ್ ಆದಮೇಲೆ ಆದರ ಪ್ರೋಸೆಸ್ ಆಗುತ್ತದೆ. ಸರ್ಕಾರ ಬರೆದರೆ ಮಾತ್ರಕ್ಕೆ ಪ್ರೋಸೆಸ್ ಸ್ಟಾರ್ಟ್ ಆಗುವುದಿಲ್ಲ. ಹಾಗಾದರೆ ಅದನ್ನು ಇಲ್ಲಿ ಚರ್ಚೆ ಮಾಡುವುದಕ್ಕೆ ಏನು ತೊಂದರೆ ಇದೆ?

ಶ್ರೀ ಡಿ.ಬಿ. ಚಂದ್ರೇಗೌಡ : ತೊಂದರೆ ಏನೂ ಇಲ್ಲ, ಸೀರಿಯಸ್‌ನೆಸ್ ಇಲ್ಲವೆಂದು ಹೇಳುತ್ತಿದ್ದೇನೆ. I am making a charge that you are not serious about the issue.

ಶ್ರೀ ಡಿ.ವಿ. ಸದಾನಂದಗೌಡ : ಮಾನ್ಯ ಅಧ್ಯಕ್ಷರೆ, ಅವರಿಗೆ ಸೀರಿಯಸೆನೆಸ್ ಇದ್ದರೆ, ಅಷ್ಟು ಗಂಭೀರವಾಗಿ ಇದರ ಬಗ್ಗೆ ಚರ್ಚೆಯಾಗಬೇಕೆಂದು ಹೇಳುವುದಾದರೆ, ನಾವು ಚರ್ಚೆಗೆ ರೆಡಿ ಇದ್ದೇವೆ, ಅದನ್ನು ಅವರು ಒಪ್ಪಿಕೊಳ್ಳಲಿ, ಮತ್ತು ಅದಕ್ಕೆ ಏಕೆ ಅಡ್ಡಗಾಲು ಹಾಕುವುದು?

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಆ ಗೋಲಿಬಾರ್‌ನಲ್ಲಿ ನಾಲ್ಕು ಜನ ಅಮಾಯಕರು ಸತ್ತಿದ್ದಾರೆ. ಆ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ಆಗುತ್ತಿಲ್ಲ, ಆ ವಿಷಯದ ಬಗ್ಗೆ ಚರ್ಚೆ ಮಾಡುವುದಕ್ಕೆ ಅವರಿಗೆ ಮನಸ್ಸಿಲ್ಲ.

ಶ್ರೀ ಸಿ. ಬೈರೇಗೌಡ (ಪೇಮಗಲ್) : ಮಾನ್ಯ ಅಧ್ಯಕ್ಷರೆ, ಇದು ಮಹತ್ತರವಾದ ವಿಚಾರವಾಗಿರುವುದರಿಂದ ಶೂನ್ಯವೇಳೆಯಲ್ಲಿ ಎತ್ತತಕ್ಕಂಥ ವಿಚಾರವಲ್ಲ, ಇದು ಇನ್ನು ಗಹನವಾಗಿ ಚರ್ಚೆಯಾಗಬೇಕಾಗಿದೆ ಎಂದು ಅವರು ವಾದವನ್ನು ಮಾಡುತ್ತಿದ್ದಾರೆ. ನಾವು ಅದಕ್ಕೋಸ್ಕರವಾಗಿ ನಿಯಮ 69ರ ಮೇರೆಗೆ ಚರ್ಚೆಯಾಗಬೇಕು ಎಂದು ನಾವು ತಮ್ಮನ್ನು ಕೇಳಿಕೊಂಡಿದ್ದೇವೆ, ಇದರ ಮೇಲೆ ತಾವು ಅವಕಾಶವನ್ನು ಮಾಡಿಕೊಟ್ಟರೆ, ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು ಈಗ ಏನು ಹೇಳುತ್ತಿದ್ದಾರೆ, ಅದಕ್ಕೂ ತಾವು ಉತ್ತರವನ್ನು ಕೊಟ್ಟಂತಾಗುತ್ತದೆ. ಮತ್ತೆ ಮಾನ್ಯ ಗೃಹ ಮಂತ್ರಿಗಳು ಏನು ಹೇಳುತ್ತಿದ್ದಾರೆಂದರೆ, ಈ ವಿಷಯದ ಬಗ್ಗೆ ಜ್ಯುಡಿಷಿಯಲ್ ಎನ್‌ಕ್ವೈರಿಗೆ ಆರ್ಡರ್ ಮಾಡಿದ್ದೇವೆ, ಹಿಂದೆ ಕೂಡ ಇಂಥದ್ದರ ಬಗ್ಗೆ ಚರ್ಚೆಗಳು ಆಗಿವೆ, ಮತ್ತು ರೂಲಿಂಗ್ ಸಹ ಆಗಿವೆ ಆದರೆ ನಮ್ಮ ವಾದವೇನೆಂದರೆ ನೀವು ಜ್ಯುಡಿಷಿಯಲ್ ಎನ್‌ಕ್ವೈರಿ ಮಾಡಿದ ತಕ್ಷಣ ಚರ್ಚೆಗೆ ಮಧ್ಯದಲ್ಲಿ ಬ್ಲಾಂಕೆಂಟ್ ಬ್ಯಾನ್ ಹಾಕುವುದಕ್ಕಾಗುವುದಿಲ್ಲ. ಯಾವ ವಿಚಾರದಲ್ಲಿ ಟರ್ಮ್ಸ್ ಆಫ್ ರೆಫೆರೆನ್ಸ್ ಇದೆಯೋ ಅದನ್ನು ಬಿಟ್ಟು ಉಳಿದಿರತಕ್ಕಂಥ ವಿಚಾರಗಳ ಬಗ್ಗೆ, ಸಮಯವನ್ನು ಅಧ್ಯಕ್ಷರು ನಿಗದಿಮಾಡಿ ಕೊಟ್ಟರೆ, ಚರ್ಚೆಯನ್ನು ಯಾವ ಹಂತಕ್ಕೂ ಬೇಕಾದರೂ

ತೆಗೆದುಕೊಂಡು ಹೋಗುವುದಕ್ಕೆ ಅವಕಾಶವಿದೆ. ಈ ಸದನದಲ್ಲಿ ಅಷ್ಟೇ ಅಲ್ಲ, ಹಿಂದೆ ಕೂಡ ಈ ರೀತಿಯ ವಿಷಯಗಳನ್ನು ಚರ್ಚೆಗೆ ತೆಗೆದುಕೊಳ್ಳಲು ಸದನದಲ್ಲಿ ರೂಲಿಂಗ್‌ಗಳು ಇವೆ. ಆ ಕಾರಣದಿಂದ ಇವತ್ತಿನ ದಿವಸ, ತಮ್ಮ ಮುಂದೆ ಕೂಡ ಟರ್ಮ್ಸ್ ಆಫ್ ರೆಫೆರೆನ್ಸ್ ಏನೂ ಇಲ್ಲ, ಅವರು ಪತ್ರವನ್ನು ಬರೆದಿದ್ದೇವೆಂದು ಹೇಳುತ್ತಾರೆ, ಅದರಲ್ಲಿ ಏನು ಎನ್ನುವುದನ್ನು ಬೇಕಾದರೆ ಹೇಳಿ. ಅದನ್ನು ಬಿಟ್ಟು ನಾವು ಚರ್ಚೆ ಮಾಡುವುದಕ್ಕೆ ಮಾರ್ಗದರ್ಶನವಾದರೂ ಆಗುತ್ತದೆ. ಅದನ್ನು ಬಿಟ್ಟು ನ್ಯಾಯಾಂಗ ತನಿಖೆಗೆ ಪತ್ರವನ್ನು ಬರೆದಿದ್ದೇವೆ, ಚರ್ಚೆ ಮಾಡುವುದು ಬಿಡುವುದು ತಮ್ಮ ಗಮನಕ್ಕೆ ಬಿಟ್ಟಿದ್ದೇವೆಂದು ಹೇಳುತ್ತಾರೆ. ಸರ್ಕಾರಕ್ಕೆ ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಬಯಸುತ್ತೇನೆ. ಮಾನ್ಯ ಮುಖ್ಯ ಮಂತ್ರಿಗಳು ಹಾಗೂ ಗೃಹ ಮಂತ್ರಿಗಳು ಸದನದಲ್ಲಿ ಇರುವುದರಿಂದ ಕೊಳ್ಳೆಗಾಲ ತಾಲ್ಲೂಕಿನ ಬಂಡೆಹಳ್ಳಿ ಗ್ರಾಮದಲ್ಲಿ ಒಬ್ಬ ಸರ್ಕಲ್ ಇನ್ಸ್‌ಪೆಕ್ಟರ್ ಒಬ್ಬನನ್ನು ಇದೇ ರೀತಿ ಸಾಯಿಸುತ್ತಾನೆ. ನ್ಯಾಯಾಂಗ ತನಿಖೆಯನ್ನು ಮಾಡುತ್ತೇವೆಂದು ಸರ್ಕಾರ ಹೇಳಿ, ಸುಮಾರು ಒಂದೂವರೆ ವರ್ಷವಾಗಿದೆ ಆದರೆ ಇನ್ನುವರೆವಿಗೂ ನ್ಯಾಯಾಂಗ ತನಿಖೆಯಾಗಲಿಲ್ಲ. ಇವತ್ತಿನ ದಿವಸ ನ್ಯಾಯಾಂಗ ತನಿಖೆ ನಡೆಯುತ್ತಿದೆ ಎನ್ನುವುದಕ್ಕೆ ಏನು ಖಾತೆ ಇದೆ? ತಾವು ಹೇಳಿ, ಇವತ್ತಿನ ದಿವಸ ಒಂದು ಉದಾಹರಣೆ ಇದೆ. ಅಲ್ಲಿ ಜಡ್ಜ್ ಕೂಡ ಅಪಾಯಿಂಟ್‌ಮೆಂಟ್ ಆಗಲಿಲ್ಲ, ಇವತ್ತು ಕೂಡ 4 ಅಮಾಯಕರನ್ನು ಸಾಯಿಸಿ ನ್ಯಾಯಾಂಗ ತನಿಖೆಯನ್ನು ಮಾಡುತ್ತೇವೆಂದು ಹೇಳಿ, ಇಲ್ಲಿ ಚರ್ಚೆಯಾಗಬಾರದೆಂದು ಒಂದು ಬ್ಲಾಂಕೆಟ್ ಬ್ಯಾನ್‌ನ್ನು ಹಾಕಬೇಕು ಎನ್ನುವುದಕ್ಕೆ ಪ್ರಯತ್ನವನ್ನು ನಡೆಸಿರುತ್ತೀರಿ, ಇದನ್ನು ಒಪ್ಪುವಂಥದ್ದು ಅಲ್ಲ. ಆದ್ದರಿಂದ ಮಾನ್ಯ ಅಧ್ಯಕ್ಷರು ತಾವು ತೀರ್ಪು ನೀಡತಕ್ಕಂಥದ್ದರಲ್ಲಿ ಇದಕ್ಕೆ ಚರ್ಚೆಯ ಅವಶ್ಯಕತೆ ಇದೆ. ನಮ್ಮ ಮುಂದೆ ಟರ್ಮ್ಸ್ ಆಫ್ ರೆಫೆರೆನ್ಸ್ ಇಲ್ಲ, ಇದರ ಬಗ್ಗೆ ಪೂರ್ತಿಯಾಗಿ ಚರ್ಚೆ ಮಾಡುವುದಕ್ಕೆ ಅಧಿಕಾರ ಇದೆ ಎನ್ನುವುದರ ಬಗ್ಗೆ ತಾವು ತೀರ್ಪು ಕೊಡಬೇಕೆಂದು ತಮ್ಮಲ್ಲಿ ನಾನು ಆರಿಕೆ ಮಾಡಿಕೊಳ್ಳುತ್ತೇನೆ.

ಶ್ರೀ ಎ. ರಾಮದಾಸ್ : ಮಾನ್ಯ ಗೃಹ ಸಚಿವರು ಚರ್ಚೆ ನಡೆಯುವ ಸಂದರ್ಭದಲ್ಲಿ ಈ ವಿಷಯವನ್ನು ನ್ಯಾಯಾಂಗ ತನಿಖೆಗೆ ಕೊಟ್ಟಿದ್ದೇವೆಂದು ಹೇಳಿ ಇದರ ಬಗ್ಗೆ ಬೇಕೆ ಬೇಡವೇ ಎನ್ನುವುದು ಒಂದು. ಮಾನ್ಯ ಕಾನೂನು ಮಂತ್ರಿಗಳು ಹೇಳುತ್ತಾರೆ, ಇದು ಶೂನ್ಯವೇಳೆಯಲ್ಲಿ ಬರುವುದಿಲ್ಲ, ನಿಯಮ 69 ರಲ್ಲಿ ತೆಗೆದುಕೊಳ್ಳಿ ಎಂದು, ಈ ಎರಡು ವಿಚಾರವನ್ನು ಸಭೆಯ ಮುಂದೆ ಇಟ್ಟು, ನಿಯಮ 69ರಲ್ಲಿ ತೆಗೆದುಕೊಳ್ಳಬೇಕೆಂದು ತಾವು ನಿರ್ಧಾರವನ್ನು ಮಾಡಿದರೆ, ಈಗಾಗಲೇ 69ರ ಅಡಿಯಲ್ಲಿ ಒಂದು ವಿಷಯ ಇರುವುದರಿಂದ ಇನ್ನೊಂದು 69ರ ಅಡಿಯಲ್ಲಿ ತೆಗೆದುಕೊಳ್ಳುವುದಕ್ಕಾಗುವುದಿಲ್ಲವೆಂದು ಹೇಳಿ, ಅದನ್ನು ನಾಳೆಗೆ ಮುಂದೂಡಿ, ಜಡ್ಜ್ ಒಬ್ಬರನ್ನು ಅಪಾಯಿಂಟ್ ಮಾಡಿ ಇಲ್ಲಿ ಚರ್ಚೆ ಮಾಡುವುದು ಬೇಡ ಎನ್ನುವ ಬಗ್ಗೆ ಒಂದು ವ್ಯವಸ್ಥೆ ನಡೆಯುತ್ತಿದೆಯಲ್ಲಾ, ಇದು ಈ ಸದನಕ್ಕೆ ಶೋಭೆ ತರುವುದಿಲ್ಲ.

ಅಧ್ಯಕ್ಷರು : ತಾವು ಹೇಳುತ್ತಿರುವುದು ಹೈಪಾಥೆಟಿಕಲ್ ಕ್ವೊಶ್ಚನ್ ಅಂಡ್ ಅನ್ಸ್ಸರ್ ಅದು ಬಿಡಿ ಮಾನ್ಯ ಮಂತ್ರಿಗಳು ಏನು ಹೇಳುತ್ತಾರೇ ಕೇಳೋಣ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಶೂನ್ಯವೇಳೆಯಲ್ಲಿ ಈ ವಿಷಯದ ಬಗ್ಗೆ ನಾನು ಪ್ರಾಥಮಿಕವಾಗಿ ಪ್ರಸ್ತಾಪವನ್ನು ಮಾಡಿದ್ದೇನೆ. ತಾವು ಅದಕ್ಕೆ ಅನುಮತಿಯನ್ನು

ಕೊಟ್ಟಿದ್ದೀರಿ, ನಾನು ಒಂದು ವಿನಂತಿಯನ್ನು ಮಾಡಿದ್ದೇನೆ. ಶೂನ್ಯವೇಳೆಯ ಒಂದು ವ್ಯಾಪ್ತಿ. ಮಾನ್ಯ ಅಧ್ಯಕ್ಷರೆ ಇದಕ್ಕೆ ನಿಮ್ಮ ಡಿಸ್ಕ್ರಿಷನರಿ ಪವರ್ ಇದೆ. ಶೂನ್ಯವೇಳೆಯಲ್ಲಿ ಯಾವುದನ್ನು ಪ್ರಸ್ತಾಪ ಮಾಡಬೇಕು, ಯಾವುದು ಚರ್ಚೆಗೆ ಬೇಡ, ಯಾವುದು ಗಂಭೀರವಾದ ವಿಚಾರ, ಇದಕ್ಕೆ ಯಾವುದೂ ಇಂಟರ್‌ಪಿಟೇಶನ್ ಇಲ್ಲ. ಮಾನ್ಯ ಚಂದ್ರೇಗೌಡರು ಅವರಿಗೆ ಯಾವುದು ಅನುಕೂಲವಾಗುತ್ತದೆ. ಆ ಸಂದರ್ಭದಲ್ಲಿ ಆ ರೂಲ್ಸ್‌ಗಳನ್ನು ಹೇಳುತ್ತಾರೆ. ಮಾನ್ಯ ಗೃಹ ಮಂತ್ರಿಗಳು ಜ್ಯುಡಿಷಿಯಲ್ ಎನ್‌ಕ್ವೈರಿ ಎಂದು ಹೇಳಿ ಚರ್ಚೆಗೆ ಅವಕಾಶವಿಲ್ಲದಂತೆ ಮಾಡುತ್ತಿದ್ದಾರೆ. ನನಗೆ ಇದರಲ್ಲಿ ಅನ್ನಿಸುತ್ತದೆ ಈ ವಿಷಯವನ್ನು ಹೇಗಾದರೂ ಮಾಡಿ, ಈಗಾಗಲೇ ಅಮಾಯಕ ಜನರು ಬಲಿಯಾಗಿದ್ದಾರೆ, ಇನ್ನು 4 ಜನ ಅಮಾಯಕ ಜನ ಚಿಂತಾಜನಕ ಸ್ಥಿತಿಯಲ್ಲಿದ್ದಾರೆ. ಇವತ್ತು ಗೃಹ ಇಲಾಖೆಯಿಂದ ಇದರಲ್ಲಿ ವಿಫಲತೆಯಾಗಿದೆ, ಪೋಲಿಸ್ ಅಧಿಕಾರಿಗಳು ಇದರಲ್ಲಿ ವಿಫಲರಾಗಿದ್ದಾರೆ. ಆ ವಿಚಾರದಲ್ಲಿ ಇವತ್ತು ಚರ್ಚೆಯಾಗಬೇಕಾಗುತ್ತದೆ. ಇದು ಸಾಮಾನ್ಯವಾದ ವಿಷಯವಲ್ಲ, ಇದೊಂದು ಗಂಭೀರವಾದ ವಿಷಯ, ಅದಕ್ಕಾಗಿ ಈ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ತಾವು ಅನುಮತಿಯನ್ನು ಕೊಟ್ಟಿದ್ದೀರಿ, ನಾನು ಅದನ್ನು ಪ್ರಾರಂಭ ಮಾಡಿರುತ್ತೇನೆ. ಮಾನ್ಯ ಕಾನೂನು ಸಚಿವರು ಶೂನ್ಯವೇಳೆಯಲ್ಲಿ ಈ ವಿಷಯ ಚರ್ಚೆ ಮಾಡುವುದಕ್ಕೆ ಬರುವುದಿಲ್ಲವೆಂದು ಹೇಳುವುದು ಸರಿಯಲ್ಲ. ಸಾಕಷ್ಟು ಸಂಪ್ರದಾಯಗಳು ಇದ್ದಾವೆ. ತಾವು ರೂಲಿಂಗ್‌ನ್ನು ಕೊಡುವುದಕ್ಕೆ ಮುಂಚೆ, ಹಿಂದೆ ನಡೆದಿರುವ ಸಂಪ್ರದಾಯಗಳ ಒಂದು ಪ್ರೊಸೀಡಿಂಗ್ಸ್‌ನ್ನು ತೆಗೆದು ನೋಡಿದರೆ ಗೊತ್ತಾಗುತ್ತದೆ. ಅದರ ಮೇಲೆ ತಾವು ನಿರ್ಣಯವನ್ನು ತೆಗೆದುಕೊಳ್ಳಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.ಅವರು ತಮಗೆ ಯಾವುದು ಅನುಕೂಲವಿದೆ ಅಂತಹ ಸಂದರ್ಭದಲ್ಲಿ ಈ ರೂಲ್ಸ್‌ಗಳನ್ನು ಹೇಳುತ್ತಾರೆ. ಅವರು ವಿರೋಧಪಕ್ಷದ ಕಡೆ ಕುಳಿತಾಗಲೂ ಅವರು ಹೇಳುವುದನ್ನು ನಾವು ಸಾಕಷ್ಟು ನೋಡಿದ್ದೇವೆ. ಅವರು ಶೂನ್ಯ ವೇಳೆಯಲ್ಲಿ ಯಾವ ಯಾವ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ ಎಲ್ಲವನ್ನೂ ಸಾಕಷ್ಟು ನೋಡಿದ್ದೇವೆ. ಈಗಾಗಲೇ ಈ ವಿಷಯದ ಬಗ್ಗೆ ಚರ್ಚೆಯು ಮುಂದು ಹೋಗುತ್ತಿತ್ತು, ಚರ್ಚೆಯ ನಂತರ ವಿಷಯಗಳು ಹೊರಗೆ ಬರುತ್ತಿತ್ತು. ಸರ್ಕಾರವು ಏನು ತಪ್ಪು ಮಾಡಿದೆ, ಗೃಹ ಇಲಾಖೆಯು ಏನು ತಪ್ಪು ಮಾಡಿದೆ ಇವೆಲ್ಲವೂ ಹೊರಗೆ ಬರುತ್ತಿತ್ತು. ಆ ವೈಫಲ್ಯತೆಗಳನ್ನು ಮುಚ್ಚಿಕೊಳ್ಳುವ ಸಲುವಾಗಿ ಇವೊತ್ತು ಈ ವಿಷಯದ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶವಿಲ್ಲ, ಇಲ್ಲಿ ಕಾನೂನು ಸಚಿವರು ಇದನ್ನು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡುವುದಕ್ಕೆ ಬರುವುದಿಲ್ಲವೆಂದು ಹೇಳುತ್ತಾರೆ. ಮಾನ್ಯ ಗೃಹಸಚಿವರು ಹೇಳುತ್ತಿದ್ದಾರೆ.

ಶ್ರೀ ಡಿ.ಬಿ. ಚಂದ್ರೇಗೌಡ : ಇದನ್ನು ಶೂನ್ಯ ವೇಳೆಯಲ್ಲಿ ಚರ್ಚೆ ಮಾಡುವುದಕ್ಕೆ ಬರುವುದಿಲ್ಲ, ಬೇರೆ ನಿಯಮದಡಿ ಚರ್ಚೆ ಮಾಡುವುದಕ್ಕೆ ಅವಕಾಶವಿದೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಗೃಹಸಚಿವರು ಮತ್ತು ಮಾನ್ಯ ಕಾನೂನು ಸಚಿವರ ಇಬ್ಬರ ಹೇಳಿಕೆಯಲ್ಲಿ ವ್ಯತ್ಯಾಸವಿದೆ. ಕಾನೂನು ಸಚಿವರದು ಏನು ಅಬ್ಜಕ್ಷನ್ ಎಂದರೆ ಶೂನ್ಯ ವೇಳೆಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶವಿಲ್ಲವೆಂದು,

Sri D.B. Chandre Gowda :- The matter is to be brought to the notice of the House. But new concepts are being brought.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಗೃಹಸಚಿವರ ಅಬ್ಜಕ್ಷನ್ ಏನೆಂದರೆ, ಇಲ್ಲ ಜ್ಯುಡಿಷಿಯರಿ

ಶ್ರೀ ಮಲ್ಲಿಕಾರ್ಜುನ ಖರ್ಗೆ : ನಾನು ಮಾನ್ಯ ಅಧ್ಯಕ್ಷರೆ, ಅಪ್ಪಣೆಗೆ ಬಿಟ್ಟಿದ್ದೇನೆ ಇದರಲ್ಲಿ ನನ್ನದೇನೂ ಅಬ್ಜಕ್ಷನ್ ಇಲ್ಲ.

ಅಧ್ಯಕ್ಷರು : ಜ್ಯುಡಿಷಿಯರಿ ಮೇಲೆ ಇನ್‌ಪ್ಲೂಯೆನ್ಸ್ ಆಗುತ್ತದೆ, ಆದ್ದರಿಂದ ಬೇಡ ಎಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಅಷ್ಟೇ ಹೊರತು ಬೇರೇನೂ ಅಲ್ಲ.

ಶ್ರೀ ಜಗದೀಶ್ ಶೆಟ್ಟರ್ : ಅಲ್ಲಿ ಅಮಾಯಕರು ತೀರಿಕೊಂಡಿದ್ದಾರೆ, ಅಲ್ಲಿ ಎಸ್.ಪಿ.ಯವರದ್ದು ತಪ್ಪು ಇದೆ, ಅದನ್ನು ಅವರು ಕಂಟ್ರೋಲ್ ಮಾಡಬಹುದಾಗಿತ್ತು. ಅವರು ಕಂಟ್ರೋಲ್ ಮಾಡಲಾರದೆ ಇವತ್ತು ಸರ್ಕಾರ ತನ್ನ ವೈಫಲ್ಯತೆಯನ್ನು ತೋರಿಸುವ ಸಲುವಾಗಿ ಇಲ್ಲಿ ಚರ್ಚೆಯನ್ನು ಮಾಡುವುದನ್ನು ಅವಾಯಿಡ್ ಮಾಡುತ್ತಿದ್ದಾರೆ. ಇವತ್ತು ಅಲ್ಲಿ ಸರ್ಕಲ್ ಇನ್ಸ್‌ಪೆಕ್ಟರ್‌ರವರನ್ನು ಸಸ್ಪೆಂಡ್ ಮಾಡಿದ್ದಾರೆ, ಇದರಲ್ಲಿ ಎಸ್.ಪಿ.ಯವರು ತಪ್ಪು ಇದೆ. ಇದರಲ್ಲಿ ಎಲ್ಲರದ್ದೂ ತಪ್ಪು ಇರುತ್ತದೆ, ಅವರುಗಳು ಬಹುಶಃ ಮನಸ್ಸು ಮಾಡಿದರೆ ಇದನ್ನು ಕಂಟ್ರೋಲ್‌ಗೆ ತರಬಹುದಾಗಿತ್ತು. ಅವರು ಏನೂ ಮಾಡಲಾರದೆ ಅಮಾಯಕರು ಬಲಿಯಾಗುವಂತಹ ಪರಿಸ್ಥಿತಿ ಹಾಗೂ ಇನ್ನೂ 4-7 ಜನರು ಚಿಂತಾಜನಕ ಪರಿಸ್ಥಿತಿಯಲ್ಲಿರುವುದರಿಂದ ಇದರ ಬಗ್ಗೆ ಸರ್ಕಾರದವರು ಥರೋ ಎನ್‌ಕ್ವೆಯರಿ ಮಾಡುವಂಥದ್ದು ಆಗಬೇಕಾಗಿರುತ್ತದೆ. ಇವತ್ತಿನ ದಿವಸ ಜ್ಯುಡಿಷಿಯಲ್ ಎನ್‌ಕ್ವೆರಿ 4-5 ವರ್ಷಗಳ ಕಾಲ ನಡೆಯುತ್ತದೆ, ಇದನ್ನೆಲ್ಲವನ್ನೂ ನಾವು ನೋಡಿದ್ದೇವೆ. ಇದರಲ್ಲಿ ಯಾರು ತಪ್ಪು ಮಾಡಿದ್ದಾರೋ ಅವರಿಗೆ ಶಿಕ್ಷೆಯಾಗಿರುವುದಿಲ್ಲ. ಹುಬ್ಬಳ್ಳಿಯಲ್ಲಿ ಗೋಲಿಬಾರ್ ಘಟನೆಯಾಗಿರುವುದನ್ನು ಸಹ ನಾವು ನೋಡಿದ್ದೇವೆ. ಗೋಲಿಬಾರ್ ಆಗಿ 4-5 ಜನರು ಸತ್ತಿದ್ದಾರೆ, ಆಗ ಜ್ಯುಡಿಷಿಯಲ್ ಎನ್‌ಕ್ವೆರಿ ಆಯಿತು, ಆ ರಿಪೋರ್ಟ್‌ನ್ನು ಸದನದ ಗಮನಕ್ಕೆ ತರಲಿಲ್ಲ, ಯಾರು ಪೊಲೀಸ್‌ರು ತಪ್ಪು ಮಾಡಿದ್ದಾರೆ ಅಂಥವರಿಗೆ ಇವತ್ತಿನವರೆಗೂ ಶಿಕ್ಷೆಯಾಗಿಲ್ಲ. ಇದು ಹೀಗೆಯೇ ಮುಂದುವರಿಯುತ್ತಿದೆ. ಈ ವಿಷಯವನ್ನು ತುರ್ತಾಗಿ ಸರ್ಕಾರದ ಗಮನಕ್ಕೆ ತರಬೇಕಾಗಿದೆ, ಇದರಲ್ಲಿ ಯಾರು ತಪ್ಪಿತಸ್ಥರಾಗಿದ್ದಾರೆ, ಇವತ್ತು ಕೇವಲ ಸರ್ಕಲ್ ಇನ್ಸ್‌ಪೆಕ್ಟರ್ ಅಲ್ಲ, ಯಾರ ಎಸ್.ಪಿ. ಅಲ್ಲಿದ್ದಾರೆ ಅವರ ಮೇಲೆಯೂ ಕಾನೂನಿನ ಕ್ರಮವನ್ನು ಕೈಗೊಳ್ಳಬೇಕು. ಇದಾಗ ಮಾತ್ರ ನಿಮಗೆ ಬೋನಾಫೈಡ್ ಆಗಿ ನಡೆದುಕೊಂಡಿದ್ದೀರೆಂಬುದು ಗೊತ್ತಾಗುತ್ತದೆ. ಗೃಹ ಇಲಾಖೆಯ ವೈಫಲ್ಯತೆ ಇದೆ, ಬಹುಶಃ ನನಗನ್ನಿಸುತ್ತದೆ, ಮಾನ್ಯ ಗೃಹಸಚಿವರು ಯಾಕೋ ಈ ಇಲಾಖೆಯಲ್ಲಿ ಬಹಳ ನಿರಾಸಕ್ತಿಯನ್ನು ಕೈಗೊಳ್ಳುತ್ತಿದ್ದಾರೆ. ಅವರು ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಿಕೊಂಡು ಇಲಾಖೆಯನ್ನು ಬದಲಾವಣೆ ಮಾಡಿಕೊಳ್ಳಲಿ. ಈ ಗೃಹ ಇಲಾಖೆಯಲ್ಲಿ ಪ್ರತಿ ನಿತ್ಯ ಕಾನೂನಿನ ಸುವ್ಯವಸ್ಥೆಗೆ ತೊಂದರೆಯಾಗಿದೆ, ದಿನನಿತ್ಯ ಧರೋಡೆಗಳಾಗುತ್ತಿವೆ, ಪೊಲೀಸ್ ವ್ಯವಸ್ಥೆಯಲ್ಲಿ ಯಾರೂ ನಂಬಿಕೆಯಿಲ್ಲದಂತಹ ಪರಿಸ್ಥಿತಿ ಈಗ ನಿರ್ಮಾಣವಾಗಿದೆ.

ಅಧ್ಯಕ್ಷರು : ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಪಾಯಿಂಟ್ ಆಫ್ ಆರ್ಡರನ್ನು ರೇಸ್ ಮಾಡಿದ್ದಾರೆ. I have to answer for his point of order.

ಶ್ರೀ ಜಗದೀಶ್ ಶೆಟ್ಟರ್ : ಭಾರತದ ಕ್ರಿಕೆಟ್ ಆಟಗಾರರಾದ ಶ್ರೀ ಜಾವಗಲ್ ಶ್ರೀನಾಥ್‌ರವರು ಪೊಲೀಸ್ ಠಾಣೆಗೆ ಹೋದರೆ ಅವರಿಗೆ ಫಿರ್ಯಾದನ್ನು ತೆಗೆದುಕೊಳ್ಳದಂತಹ ಪರಿಸ್ಥಿತಿ ಆಗಿದೆ. ಇಂತಹ ಪರಿಸ್ಥಿತಿಯೂ ನಿರ್ಮಾಣವಾಗಿದೆ. ಪೊಲೀಸ್ ಠಾಣೆಯ ಅಕ್ಕಪಕ್ಕದಲ್ಲಿ ಇವತ್ತಿನದಿವಸ ಒಂದಂಕಿಯ ಲಾಟರಿಯು ನಡೆಯುತ್ತಿದೆ. ಹೀಗಾಗಿರುವುದರಿಂದ ಪೊಲೀಸ್ ವ್ಯವಸ್ಥೆಯಲ್ಲಿ ಜನರಿಗೆ ನಂಬಿಕೆ ಹೊರಟು ಹೋಗುತ್ತಿದೆ. ಇದರ ಬಗ್ಗೆ ನಾನು ಸಾಕಷ್ಟು ವಿಷಯಗಳನ್ನು ಹೇಳಿದ್ದೇನೆ. ಸರ್ಕಾರದ ಇದರ ಬಗ್ಗೆ ಗಂಭೀರವಾಗಿ ತೆಗೆದುಕೊಳ್ಳಬೇಕು, ಇದರಲ್ಲಿ ಯಾರು ತಪ್ಪು ಮಾಡಿದ್ದಾರೆ, ಅವರ ಮೇಲೆ ಕಾನೂನಿನ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಒತ್ತಾಯವನ್ನು ನಾನು ಮಾಡುತ್ತಿದ್ದೇನೆ.

ಅಧ್ಯಕ್ಷರು : ಈಗ ನಮ್ಮ ಮುಂದೆ ಎರಡು ಪ್ರಶ್ನೆಗಳು ಇರುತ್ತವೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಎ.ಬಿ. ಪಾಟೀಲ್‌ರವರು ಸ್ಥಳಕ್ಕೆ ಹೋಗಿ ಬಂದಿದ್ದಾರೆ, ಅವರು ಮಾತನಾಡುತ್ತಾರೆ. ಅವರು ಮಾತನಾಡಿದ ನಂತರ 5 ನಿಮಿಷ ಮಾತನಾಡುತ್ತೇನೆ.

ಅಧ್ಯಕ್ಷರು : ಮಾನ್ಯ ಸಿಂಧ್ಯಾರವರೆ ಅವರು ಯಾವುದರ ಬಗ್ಗೆ ಮಾನನಾಡುತ್ತಾರೆ? ಇದರ ಬಗ್ಗೆ ಪಾಯಿಂಟ್ ಆಫ್ ಆರ್ಡರನ್ನು ರೇಸ್ ಮಾಡಿದ್ದಾರಲ್ಲಾ. ಅದಕ್ಕೆ ನಾನು ಉತ್ತರವನ್ನು ಕೊಡಬೇಕಲ್ಲಾ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ : ಈ ಪ್ರಶ್ನೆಗೆ ಪಾಯಿಂಟ್ ಆಫ್ ಆರ್ಡರ್ ಏನು?

ಅಧ್ಯಕ್ಷರು : ಮಾನ್ಯ ಮಂತ್ರಿಗಳು ಪಾಯಿಂಟ್ ಆಫ್ ಆರ್ಡರನ್ನು ರೇಸ್ ಮಾಡಿದ್ದಾರಲ್ಲಾ?

ಶ್ರೀ ಕೆ.ಬಿ. ಮಲ್ಲಿಕಾರ್ಜುನ : ಮಾನ್ಯ ಅಧ್ಯಕ್ಷರೆ ಪಾಯಿಂಟ್ ಆಫ್ ಆರ್ಡರ್‌ಗೆ ತಾವು ರೂಲಿಂಗ್ ಕೊಡುವ ಮೊದಲು ನಿಮ್ಮದೇ ಆಗಿರತಕ್ಕಂತಹ ಒಂದು ರೂಲಿಂಗ್ ಈ ಸದನದಲ್ಲಿದೆ. ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಿರತಕ್ಕಂತಹ ವಿಷಯಗಳು 2 ಗಂಟೆಗಳ ಕಾಲ ಚರ್ಚೆಯಾದಾಗ ಏನು ಕಾನೂನು ಸಚಿವರ ಪಾಯಿಂಟ್ ಆಫ್ ಆರ್ಡರ್ ಇದೆಯೋ ಆ ಪಾಯಿಂಟ್ ಆಫ್ ಆರ್ಡರನ್ನೂ ನಾನು ಎತ್ತಿದಾಗ ತಾವು ರೂಲಿಂಗ್ ಕೊಟ್ಟಿದ್ದೀರಿ, ಮಹತ್ವದ ವಿಷಯಗಳಿದ್ದಾಗ, ಎಷ್ಟು ಬೇಕಾದರೂ ಚರ್ಚೆಯಾಗಬಹುದು, ಆದರ ಬಗ್ಗೆ ಸರ್ಕಾರದವರು ಉತ್ತರ ಹೇಳಬೇಕಾಗುತ್ತದೆ, ಆದರಿಂದ ನಾನು ಪಾಯಿಂಟ್ ಆಫ್ ಆರ್ಡರ್ ಏನು ಇದೆ.

Mr. Speaker :- I am asking about the judicial matters, not general matters. The Subject is before the judicial authority.

ಶ್ರೀ ಕೆ.ಬಿ. ಮಲ್ಲಿಕಾರ್ಜುನ : ಜ್ಯುಡಿಷಿಯಲ್ ಮ್ಯಾಟರ್‌ಗೂ ಸಹಿತ ಜ್ಯುಡಿಷಿಯಲ್ ಆಫೀಸರನ್ನು ಅಪಾಯಿಂಟ್ ಮಾಡಿದ್ದರೂ ಸಹಿತ ಚರ್ಚೆ ಮಾಡಿರತಕ್ಕಂಥದ್ದು ಉದಾಹರಣೆಗಳು ಇವೆ.

Mr. Speaker :- That is why I want to verify everything. ಕೌಲ್ ಅಂಡ್ ಶಕ್ದರ್ ಇದಲ್ಲಿರುವ ರೂಲಿಂಗ್ಸ್ ಎಲ್ಲವನ್ನೂ ನಾನು ವೆರಿಫೈ ಮಾಡಬೇಕು. ನಾನು ಬೇರೆ ವಿಷಯಗಳ ಬಗ್ಗೆ ಹೇಳಿರಬಹುದು. ಜ್ಯುಡಿಷಿಯಲ್ ಮ್ಯಾಟರ್ ಬಗ್ಗೆ ನಾನು ಹೇಳಿರುವುದರ ಬಗ್ಗೆ ನಾನು ಜ್ಞಾಪಕವಿಲ್ಲ. ಜ್ಯುಡಿಷಿಯಲ್ ಮ್ಯಾಟರ್ ಬಗ್ಗೆ ನಾನು ರೂಲಿಂಗ್ ಕೊಟ್ಟಿರುವ ಬಗ್ಗೆ ನನಗೆ ಜ್ಞಾಪಕವಿಲ್ಲ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ : ಮಾನ್ಯ ಅಧ್ಯಕ್ಷರೆ, ತಾವು ಜ್ಯುಡಿಷಿಯಲ್ ಮ್ಯಾಟರ್ ಬಗ್ಗೆ ಹೇಳಿರುವುದಿಲ್ಲ. ತಾವು ಶೂನ್ಯ ವೇಳೆಯ ಬಗ್ಗೆ ಹೇಳಿದ್ದೀರಿ.

ಅಧ್ಯಕ್ಷರು : ಮಲ್ಲಿಕಾರ್ಜುನರವರೇ ತಾವು ಕುಳಿತುಕೊಳ್ಳಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ನನ್ನ ಕ್ಯಾರಿಫಿಕೇಷನ್ ಏನೆಂದರೆ, ಹಿರಿಯ ಸದಸ್ಯರಾದ ಶ್ರೀ ಬೈರೇಗೌಡರು ಈಗಾಗಲೇ ಒಂದು ಪ್ರಸ್ತಾಪವನ್ನು ಮಾಡಿದ್ದರು. ಅದೇನೆಂದರೆ, ಬಂಡಹಳ್ಳಿಯಲ್ಲಿ ಇದೇ ರೀತಿಯಾದಂತಹ ಘಟನೆ ಒಂದು ನಡೆಯಿತು. ಅದರ ಬಗ್ಗೆ ಇಲ್ಲಿಯವರೆವಿಗೆ ಏನೂ ಆಗಿಲ್ಲ, ಏನು ನಡೆದಿದೆ ಗೊತ್ತಿಲ್ಲವೆಂದು ಹೇಳಿದರು. ಈಗಾಗಲೇ ಅಡಿಷನಲ್ ಸೆಷನ್ಸ್ ಜಡ್ಜ್ ಮೈಸೂರುರವರು ಅಪಾಯಿಂಟ್‌ಮೆಂಟ್ ಆಗಿ ಇದರ ಬಗ್ಗೆ ಪ್ರೊಸೀಡಿಂಗ್ಸ್ ನಡೆದು ಅದು ಹಾಫ್ ವೇನಲ್ಲಿದೆ. ಏನೂ ಆಗಿಲ್ಲವೆಂದರೆ, ನಾವೇನಾದರೂ ಜಡ್ಜ್‌ಗಳಿಗೆ ಹೇಳುವುದಕ್ಕೆ ಆಗುತ್ತದೆಯೇ? ನೀವು ಕ್ವಿಕ್ ಆಗಿ ಡಿಸ್‌ಪೋಸಲ್ ಮಾಡಿ ಈ ಕೇಸ್‌ನ್ನು ತೆಗೆದುಕೊಂಡು ಬೇಗನೆ ತೀರ್ಮಾನ ಕೊಡಿ ಎಂದು ನಾವು ಒತ್ತಡ ಮಾಡುವುದಕ್ಕೆ ಬರುವುದಿಲ್ಲ. ಅದರ ಬಗ್ಗೆ ಸರ್ಕಾರ ಏನೂ ಮಾಡಲಿಲ್ಲ ಎನ್ನತಕ್ಕಂಥದ್ದು ಅಷ್ಟು ಸಮಂಜಸವಲ್ಲ. ಈಗಾಗಲೇ ಆ ಕೆಲಸಗಳು ನಡೆದಿದೆ. ಜ್ಯುಡಿಷಿಯಲ್ ಎನ್‌ಕ್ವೈರಿ ಹಾಫ್ ವೇನಲ್ಲಿದೆ. ಬಹುಶಃ ಅವರು ಅದಷ್ಟು ಬೇಗನೆ ಮುಗಿಸಬಹುದು, ಅದಕ್ಕಾಗಿ ಅವರು ಏನೂ ಮಾಡಲಿಲ್ಲವೆಂದು ಹೇಳಿದರೆ ಅದು ಅವರ ಮೇಲೆಯೂ ಸಹ ರಿಫ್ಲೆಕ್ಷನ್ ಆಗುತ್ತದೆ. ಈಗಾಗಲೇ ಈ ಕೇಸಿನಲ್ಲಿ ಪ್ರೊಸಿಡಿಂಗ್ಸ್ ನಡೆದಿದೆ.

Sri C. Byre Gowda : Thank you. I stand corrected.

ಅಧ್ಯಕ್ಷರು : ಮಾನ್ಯ ಬೈರೇಗೌಡರೆ, ಕೇಳಿ, ಮಾನ್ಯ ಮಂತ್ರಿಗಳು ಪಾಯಿಂಟ್ ಆಫ್ ಆರ್ಡರನ್ನು ರೇಸ್ ಮಾಡಿದ್ದಾರೆ. ಶೂನ್ಯ ವೇಳೆಯಲ್ಲಿ ಈ ಜ್ಯುಡಿಷಿಯಲ್ ಮ್ಯಾಟರ್ಸ್ ರೈಸ್ ಮಾಡುವುದಕ್ಕೆ ಅನುಮತಿ ಇದೆಯೊ ಅಥವಾ ಇಲ್ಲವಾ ಎಂಬುದು ನಂ:1 They have already written. ನಾನು ಎರಡು ಕಡೆಯವರು ಮಾತನಾಡುವುದನ್ನು ಕೇಳಿದ್ದೇನೆ. ನಿಮ್ಮ ಪಕ್ಷದವರು ಪ್ರಸ್ತಾಪ ಮಾಡಿದ ವಿಚಾರವನ್ನೂ ಸಹ ಕೇಳಿದ್ದೇನೆ. ಆ ಕಡೆಯವರು ಮಾತನಾಡುವುದನ್ನು ಸಹ ಕೇಳಿದ್ದೇನೆ. ಇದರ ಬಗ್ಗೆ ನನ್ನ ಅಭಿಪ್ರಾಯದಲ್ಲಿ ಮಾನ್ಯ ಕಾನೂನು ಸಚಿವರಾದ ಶ್ರೀ ಚಂದ್ರೇಗೌಡರು ಏನು ರೈಸ್ ಮಾಡಿದ್ದಾರೋ ಶೂನ್ಯ ವೇಳೆಯಲ್ಲಿ ಈ ವಿಷಯವನ್ನು ರೈಸ್ ಮಾಡಬಹುದಾ, ಇಲ್ಲವಾ ಎಂಬುದು. ಇದರ ಜೊತೆಗೆ ಶ್ರೀ ಮಲ್ಲಿಕಾರ್ಜುನವರರು ಏನು ಹೇಳುತ್ತಾರೆಂದರೆ ನೀವು ಇದೇ ಪ್ರಕಾರ ಅನೇಕ ಸಲ ಪರ್ಮಿಷನ್ ಕೊಟ್ಟಿದ್ದೀರೆಂದು ಹೇಳುತ್ತಾರೆ. ಜ್ಯುಡಿಷಿಯಲ್ ಮ್ಯಾಟರ್ಸ್ ಬಗ್ಗೆ ನಾನು ಪರ್ಮಿಷನ್‌ನ್ನು ಕೊಟ್ಟಿರುವ ಬಗ್ಗೆ ನನಗೆ ಜ್ಞಾಪಕವಿಲ್ಲ.

ಒಂದು ಕಟ್ ಮಾನ್ಯ ಬೈರೆಗೌಡರು ಮತ್ತು ಸಿಂಧ್ಯಾರವರು 69ರ ಅಡಿಯಲ್ಲಿ ಇದನ್ನು ಆಡ್ಮಿಟ್ ಮಾಡಿ ಎಂದು ಹೇಳುತ್ತಾರೆ. ಅದು ಎರಡನೆಯ ಪಾಯಿಂಟ್ ಈ ಎರಡು ಪಾಯಿಂಟ್‌ಗಳು ಮತ್ತು ಶೂನ್ಯ ವೇಳೆಯ ವ್ಯಾಪ್ತಿ ಏನು? ಅದರ ವ್ಯಾಪ್ತಿಯಲ್ಲಿ ಇವೆಲ್ಲವೂ ಬರುತ್ತದೆಯೇ, ಜ್ಯುಡಿಷಿಯಲ್ ಮ್ಯಾಟರ್ ಬರುತ್ತದೆಯೇ, ಇವೆಲ್ಲವನ್ನೂ ಅಲೋಚನೆ ಮಾಡಿ I will take it up tomorrow. Now, we will go to the next subject.

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೇ ತಾವು ಬಹಳ ಮುಖ್ಯವಾದಂತಹ ವಿಚಾರವನ್ನು ಪ್ರಸ್ತಾಪ ಮಾಡಿದ್ದೀರಿ. ಶೂನ್ಯ ವೇಳೆಯಲ್ಲಿ ಎತ್ತತಕ್ಕಂತಹ ವಿಚಾರ ಚರ್ಚೆಗೆ ಅವಕಾಶವಿಲ್ಲ.

ಅಧ್ಯಕ್ಷರು : ಕೌಲ್ ಅಂಡ್ ಶಕ್ಧರ್ ಪುಸ್ತಕದಿಂದ ವೆರಿಫೈ ಮಾಡಿಸುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : ತಾವು ಅದನ್ನು ಹೇಳಲಿಲ್ಲ. ಈ ವಿಷಯವನ್ನು ಎತ್ತಬಹುದೋ ಅಥವಾ ಬಿಡಬಹುದೋ ಅದು ತಮಗೆ ಬಿಟ್ಟಿರುವುದು.

ಅಧ್ಯಕ್ಷರು : ಕೌಲ್ ಅಂಡ್ ಶಕ್ಧರ್‌ನ್ನು ವೆರಿಫ್ ಮಾಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ :- ಸನ್ಮಾನ್ಯ ಅಧ್ಯಕ್ಷರೆ, ನಾವು ಅದನ್ನೇ ಹೇಳುತ್ತಿರುವುದು, ತಾವು ಹಳೆಯ ಸಂಪ್ರದಾಯಗಳನ್ನೂ ಸಹ ನೋಡಬೇಕಾಗುತ್ತದೆ.

ಅಧ್ಯಕ್ಷರು :- ನಾನು ಸಮಗ್ರವಾಗಿ ಎಲ್ಲವನ್ನೂ ನೋಡುತ್ತೇನೆ.

Sri D.B. Chandre Gowda : No, No, ಶೂನ್ಯ ವೇಳೆಯಲ್ಲಿ ಚರ್ಚೆಗೆ ಅವಕಾಶವಿಲ್ಲ. That is the fundamental point. ವಿಷಯವನ್ನು ಎತ್ತಬಹುದು.

ಅಧ್ಯಕ್ಷರು :- ತಾವು ಏನು ರೈಸ್ ಮಾಡಿದ್ದಿರೋ ಅದನ್ನು ನೋಡೋಣ.

ಶ್ರೀ ಡಿ.ಬಿ. ಚಂದ್ರೇಗೌಡ :- ಚರ್ಚೆಯನ್ನು ಮಾಡಬೇಕೆಂದರೆ, ನಿಯಮಗಳು ಬೇರೆ ಇವೆ ಅದನ್ನು ಮಾಡಿ.

4. (ii) : ಮಹಾರಾಷ್ಟ್ರ ಅಪೆಕ್ಸ್ ಬ್ಯಾಂಕ್ ಠೇವಣಿದಾರರಿಗೆ ಠೇವಣಿ ಹಣ ಮರು ಪಾವತಿ ಮಾಡದೇ ಇರುವುದರಿಂದ ಉಂಟಾಗಿರುವ ತೊಂದರೆ ಬಗ್ಗೆ.

ಶ್ರೀ ಡಿ.ವಿ. ಸದಾನಂದಗೌಡ (ಪುತ್ತೂರು) :- ಮಾನ್ಯ ಅಧ್ಯಕ್ಷರೆ, ಇದು ಕೂಡ ಬಹಳ ಗಂಭೀರವಾದ ವಿಚಾರವಾಗಿದೆ. ಇವತ್ತು ಠೇವಣಿ ಇಟ್ಟಿರುವ ಸಾವಿರಾರು ಜನರಿಗೆ ಆದ ತೊಂದರೆಯ ಬಗ್ಗೆ ನಾನು ಸದನದಲ್ಲಿ ಪ್ರಸ್ತಾಪ ಮಾಡುವುದಕ್ಕೆ ಇಚ್ಛಿಪಡುತ್ತೇನೆ. ಪ್ರೈವೇಟ್ ಫೈನಾನ್ಸ್‌ಗಳು, ಚೀಟಿಯ ವ್ಯವಹಾರಗಳು, ಇವುಗಳೆಲ್ಲವೂ ತಮಗೆ ಗೊತ್ತಿರುತ್ತದೆ. ಇದರ ಬಗ್ಗೆ ನಾವು ಇವೆಲ್ಲವೂ ಬ್ಲೇಡ್ ಕಂಪನಿಗಳೆವರು ಹೇಳುತ್ತಿದ್ದೇವೆ. ಇವುಗಳು ಸಾವಿರಾರು ಜನರಿಗೆ ಮೋಸ ಮಾಡಿವೆ. ಇದು ಎಲ್ಲಿಯವರೆವಿಗೆ ತಲುಪಿದೆ ಎಂದರೆ ಇದು ಅಪೆಕ್ಸ್ ಬ್ಯಾಂಕ್‌ನವರಿಗೆ ತಲುಪಿದೆ, ನಮ್ಮ ಮಹಾರಾಷ್ಟ್ರ ಬ್ಯಾಂಕ್ ಉಡುಪಿಯಲ್ಲಿರುವುದು, ಕರ್ನಾಟಕ ರಾಜ್ಯದಲ್ಲಿ ನೂರಾರು ಶಾಖೆಗಳನ್ನು ಹೊಂದಿದ್ದು, ಸುಮಾರು 400 ಕೋಟಿ ರೂಪಾಯಿಗಳಿಗಿಂತಲೂ